ಉಪನ್ಯಾಸ ಗ್ರಂಥಮಾಲೆ

೨೩೮

ಹಂಪೆ

ವಸುಂಧರಾ ಫಿಲಿಯೋಜಾ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾರ್ಚ್, ೧೯೭೬

ರಜತ ಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೩೮

ಹಂಪೆ

ವಸುಂಧರಾ ಫಿಲಿಯೋಜಾ

ದೂರವಾಣಿ: 24226
ಗೀತಾ ಬುಕ್ ಹೌಸ್
ಪುಸ್ತಕ ವ್ಯಾಪಾರಿಗಳು
ಚಿಕ್ಕಪೇಟೆ ಚೌಕ, ಬೆಂಗಳೂರು-560053

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಮಾರ್ಚ್, ೧೯೭೬

ಪ್ರಕಾಶಕರು :

ಎಸ್. ಎಸ್. ಒಡೆಯರ,
ಎಂ. ಎ., ಎಲ್‌ಎಲ್. ಬಿ.

ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ–೫೮೦೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಮಾರ್ಚ್, ೧೯೭೬

© ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಬೆಲೆ : ೨೫ ಪೈಸೆ

ಮುದ್ರಕರು :

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ–೫೮೦೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗವಿಸ್ತರಣ ಹಾಗು ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗು ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗು ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನವಿಟ್ಟು ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೩೭ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ
೧೭-೩-೧೯೭೬

ಆರ್. ಸಿ. ಹಿರೇಮಠ
ಕುಲಪತಿಗಳು

ಅರಿಕೆ

ನಾನಿನ್ನೂ ಇತಿಹಾಸದ ವಿದ್ಯಾರ್ಥಿನಿಯಾಗಿದ್ದಾಗ ಪೂಜ್ಯ ಗುರುಗಳಾದ ಡಾ॥ ಜಿ. ಎಸ್. ದೀಕ್ಷಿತ ಹಾಗೂ ವೈಕುಂಠವಾಸಿಗಳಾದ ಪಿ. ಬಿ. ದೇಸಾಯಿ ಅವರಿಂದಾಗಿ ಹಂಪೆಯ ದರ್ಶನ ಭಾಗ್ಯ ನನಗೆ ಉಂಟಾಯಿತು. ಆಗಲೇ ಈ ಗುರುಗಳೀರ್ವರ ಪ್ರಭಾವದಿಂದ ಹಂಪೆಯ ಬಗೆಗೆ ಎಲ್ಲಿಲ್ಲದ ಕುತೂಹಲ, ಆಸಕ್ತಿಗಳ ಜೊತೆಗೆ ಪ್ರೇಮವೂ ಅಂಕುರವಾಯಿತು.

ನಾನು ಕರ್ನಾಟಕವನ್ನು ಅಗಲಿ ಸುಮಾರು ಹತ್ತು ವರುಷಗಳೇ ಉರುಳಿದುವು. ಆದರೂ ಆಗಾಗ ನಾಡಿಗೆ ಬಂದು ಹೋಗುವ ಅವಕಾಶವಿದ್ದರೂ ತಾಯಿ ನುಡಿಯ ಸಂಪರ್ಕ ತಪ್ಪಿ ಕನ್ನಡಕ್ಕೆ ಸೇವೆ ಸಲ್ಲಿಸುವ ಭಾಗ್ಯ ಯಾವಾಗ ಒದಗುವುದೋ ಎಂದು ಪರಿತಪಿಸುತ್ತಿರುವಾಗ,ನನ್ನ ಗುರುಗಳಾದ ಡಾ॥ಜಿ.ಎಸ್. ದೀಕ್ಷಿತರು ಹಂಪೆಯ ಬಗೆಗೆ ಬರೆಯಲು ಹೇಳಿದ ತಕ್ಷಣವೇ ಒಪ್ಪಿಕೊಂಡು ಬಿಟ್ಟೆ. ಆದರೆ ಬರೆಹ ಅಷ್ಟು ಸುಲಭವಲ್ಲ ಎನಿಸತೊಡಗಿತು. ಯಾಕೆಂದರೆ ಹಂಪೆಯ ಅಧ್ಯಯನಕ್ಕೆ ಸುದೀರ್ಘ ಕಾಲಾವಕಾಶವೇ ಮುಡಿಪಾಗಬೇಕು. ನಿಜಸ್ಥಿತಿ ಹೀಗಿರುವಾಗ ದೊರೆತ ಅಲ್ಪಾವಕಾಶದ ಅಧ್ಯಯನದಿಂದ ಸಂಗ್ರಹಿಸಿದ ವಿಷಯವನ್ನು ಆದಷ್ಟು ಸಂಕ್ಷಿಪ್ತಗೊಳಿಸಿ ಪುಟ್ಟ ಹೊತ್ತಿಗೆಯ ರೂಪದಲ್ಲಿ ನಿಮ್ಮ ಮುಂದಿಟ್ಟಿದ್ದೇನೆ.

ಇಲ್ಲಿ ಮುಖ್ಯ ಉದ್ದೇಶ ಕಟ್ಟಡಗಳ ಇತಿಹಾಸವಾಗಿದೆ.ಅಂದರೆ ಕಟ್ಟಡಗಳ ನಿರ್ಮಾಣಕಾಲ ಹಾಗೂ ಅವುಗಳಿಗೆ ಕೊಟ್ಟ ದಾನ ದತ್ತಿಗಳನ್ನು ಕುರಿತು ಹೇಳಿದ್ದೇನೆ. ಕಟ್ಟಡ ಶಿಲ್ಪ, ವಿನ್ಯಾಸ

ಕುರಿತು ಎಲ್ಲಿಯೂ ಹೇಳಿಲ್ಲವಾದರೂ ಹಲವೆಡೆ ಮಾತ್ರ ಗೋಪುರ, ಶಿಖರ, ಕಂಬಗಳ ಬಗೆಗೆ ಹೇಳದೆಯೇ ಇಲ್ಲ. ಈ ಹೊತ್ತಿಗೆಗೆ ಮುಖ್ಯವಾಗಿ ಶಾಸನಗಳೂ, ಕೆಲವೆಡೆ ಕಾವ್ಯಗಳೂ ಉಪಯೋಗ ನೀಡಿವೆ. ಪಾಯೆಸ್ (Paes) (ಪೋರ್ತುಗೀಜ್ ಉಚ್ಚಾರ), ನ್ಯೂನಿಜ್, ಅಬ್ದುರ್-ರಜಾಕರು ಬರೆದಿಟ್ಟ ದಾಖಲೆಗಳ ಉಪಯೋಗವೂ ದೊರೆತಿದೆ. ಗರ್ಭಗೃಹ, ಶುಕನಾಸಿಕ, ಅಂತರಾಳಿಕ, ರಂಗಮಂಟಪ, ಮಹಾರಂಗಮಂಟಪ–ಈ ಶಾಸನ ಪ್ರಯೋಗಗಳನ್ನೇ ಇಲ್ಲಿ ಬಳಸಿಕೊಂಡಿರುವೆ.

ಈ ಕೆಲಸದಲ್ಲಿ ಎಲ್ಲ ಸೌಕರ್ಯವನ್ನೂ ನೀಡಿದ ಫ್ರೆಂಚ್ ಇನ್‌ಸ್ಟಿಟ್ಯೂಟ್ ಆಫ್ ಇಂಡಾಲಜಿ ಡೈರೆಕ್ಟರರಾದ ಜಾ ಫಿಲಿಯೋಜಾ ಅವರಿಗೂ, ಸಕಾಲಕ್ಕೆ ಸೂಕ್ತ ಸೂಚನೆ ಕೊಡುತ್ತ ಪ್ರೋತ್ಸಾಹವಿತ್ತ ನನ್ನ ಪತಿ ಪಿಯರ್ ಸಿಲ್ವ ಅವರಿಗೂ, ನಕಾಶೆ ತಯಾರಿಸಿಕೊಟ್ಟ ಫ್ರೆಂಚ್ ಇನ್‌ಸ್ಟಿಟ್ಯೂಟ್‌ನ ನಕಾಶೆ ವಿಭಾಗದವರಿಗೂ ನನ್ನ ವಂದನೆಗಳು. ಕನ್ನಡಕ್ಕೆ ನನ್ನ ಅಳಿಲುಸೇವೆ ಸಲ್ಲಿಸುವ ಸದವಕಾಶ ಒದಗಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳು, ಕುಲಸಚಿವರು, ವ್ಯಾಸಂಗವಿಸ್ತರಣ ಪ್ರಕಟನ ವಿಭಾಗದ ನಿರ್ದೇಶಕರಿಗೂ ಹಾಗೂ ನನ್ನ ಪೂಜ್ಯ ಗುರುಗಳಾದ ಡಾ॥ ಜಿ. ಎಸ್. ದೀಕ್ಷಿತ ಅವರಿಗೂ ಋಣಿಯಾಗಿರುವೆ.

ಪಾಂಡಿಚೆರಿ
೯-೧೨-೭೫

—ವಸುಂಧರಾ ಫಿಲಿಯೋಜಾ

ಹಂಪೆ

ಕರ್ನಾಟಕ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯವೆಂದು ಹಿಂದೂ ಸಂಸ್ಕೃತಿಯ ವಜ್ರರಕ್ಷೆಯಾಗಿದ್ದ ಹಂಪೆಯ ಹೆಸರನ್ನು ಕೇಳದವರಿಲ್ಲ. ಅದರಲ್ಲೂ ಆಕಾಶವಾಣಿಯಲ್ಲಿ ಮೂಡಿಬರುವ "ಶ್ರೀ ಪಂಪಾನಗರೀ ನಿವಾಸಜಯ" ಎಂದು ಆರಂಭಗೊಳ್ಳುವ

ಪಂಪಾಸ್ತುತಿಯನ್ನು ಅದೆಷ್ಟೋ ಸಲ ಕೇಳಿ ರೋಮಾಂಚ ಗೊಂಡಿದ್ದೇವೆ, ಭಕ್ತಿರಸದಲ್ಲಿ ಒಂದಾಗಿದ್ದೇವೆ. ಹರಿಹರ ಕವಿಯ ಈ ವಿರೂಪಾಕ್ಷಸ್ತುತಿಗೆ ಡಾ॥ ಮಲ್ಲಿಕಾರ್ಜುನ ಮನ್ಸೂರರು ಸಂಗೀತರೂಪವಿತ್ತು ಭವ್ಯಗೊಳಿಸಿದ್ದಾರೆ. ಅವರ ಸಂಗೀತದಷ್ಟೇ ಭವ್ಯವಾಗಿದೆ,ಹಂಪೆಯ ಇತಿಹಾಸ ಪ್ರಸಿದ್ಧ ಶಿಲಾನಿರ್ಮಿತ ಗುಡಿ ಗೋಪುರಗಳು. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿ ತುಂಗಭದ್ರೆಯ ದಕ್ಷಿಣ ದಂಡೆಯ ಮೇಲಿರುವ ಕ್ಷೇತ್ರವೇ ಹಂಪೆ.

ಮೊತ್ತಮೊದಲಿಗೆ ದೊರೆಯುವ ಚಾಲುಕ್ಯ ಸೋಮೇಶ್ವರನ ಶಿಲಾಶಾಸನವೊಂದರಲ್ಲಿ ಅರಸನು ದಾನ ಕೊಟ್ಟ ವಿಷಯವಿದೆ. ಅನಂತರ ಸಿಗುವುದೇ ಹೊಯ್ಸಳ ಸೋಮೇಶ್ವರನ ಶಾಸನ. ಈ ಆಧಾರಗಳಿಂದ ಹಂಪೆ ಮೊದಲಿಗೆ ಕಲ್ಯಾಣ ಚಾಲುಕ್ಯರ ಅನಂತರ ಹೊಯ್ಸಳರ ಆಡಳಿತಕ್ಕೊ ಒಳಗಾಗಿತ್ತು ಎಂದು ಹೇಳಬಹುದು. ೧೪ನೆಯ ಶತಮಾನದಲ್ಲಿ ಕಂಪಿಲಿದೇವ ಹೇಮ ಕೂಟದಲ್ಲಿ ಗುಡಿಗಳನ್ನು ಕಟ್ಟಿಸಿದನಾದ್ದರಿಂದ ಹಂಪೆ ಅವನ ಆಡಳಿತಕ್ಕೊ ಅಧೀನವಾಗಿತ್ತು. ಹೊಯ್ಸಳ ಮುಮ್ಮಡಿ ಬಲ್ಲಾಳ ಕಂಪಿಲಿದೇವನನ್ನು ಸೋಲಿಸಿ ಹಂಪೆಯನ್ನು ರಾಜಧಾನಿ ಮಾಡಿ "ವಿರೂಪಾಕ್ಷ ಹೊಸಪಟ್ಟಣ" ಎಂಬ ಹೆಸರಿನಿಂದ ಕರೆದು, ತನ್ನ ಮಗ ವಿಜಯ ವಿರೂಪಾಕ್ಷ ಬಲ್ಲಾಳನನ್ನು ಅಧಿಪತಿಯನ್ನಾಗಿ ನೇಮಿಸಿದ. ಮುಮ್ಮಡಿ ಹಾಗೂ ನಾಲ್ಮಡಿ ಬಲ್ಲಾಳರು ಕ್ರಮ ವಾಗಿ ಕ್ರಿ.ಶ. ೧೩೪೨ ಹಾಗೂ ೧೩೪೬ರಲ್ಲಿ ಮರಣ ಹೊಂದಿದ ಮೇಲೆ, ಅಷ್ಟರಲ್ಲಾಗಲೇ ರಾಜಕೀಯವಾಗಿ ಪ್ರವರ್ಧಮಾನಕ್ಕೇರಿ

ಬಂದಿದ್ದ ಸಂಗಮವಂಶದ ಹರಿಹರ, ಬುಕ್ಕರು ರಾಜ್ಯಸೂತ್ರವನ್ನು ತಾವೇ ವಹಿಸಿಕೊಂಡರು.

ಸಂಗಮ ಅರಸರು ಕ್ರಿ. ಶ. ೧೩೩೬ ರಿಂದ ೧೪೪೬ರ ವರೆಗೆ ಒಂದು ಶತಮಾನಕ್ಕೂ ಮಿಕ್ಕು ರಾಜ್ಯಸೂತ್ರ ನಿರ್ವಹಿಸಿದರು. ಈ ವಂಶದಲ್ಲಿ ಆಗಿಹೋದ ಅರಸರಲ್ಲಿ ಹರಿಹರ, ಬುಕ್ಕ ಮತ್ತು ದೇವರಾಯರು ಪ್ರಮುಖ ಅರಸರು.

ಸಂಗಮವಂಶದ ಕೊನೆಯ ಅಸಮರ್ಥ ಅರಸನನ್ನು ಸಿಂಹಾಸನದಿಂದ ಚ್ಯುತಗೊಳಿಸಿ ಸಾಳುವ ನರಸಿಂಹನು ೧೪೮೫ರಲ್ಲಿ ಪಟ್ಟಕ್ಕೆ ಏರುತ್ತಾನೆ. ಇವನ ತರುವಾಯ ಬಂದ ಇಮ್ಮಡಿ ಸಾಳುವ ನರಸಿಂಹ ತಂದೆಯಂತೆ ಮುತ್ಸದ್ಧಿಯಾಗಿರದ ಕಾರಣ ಅವನ ಮಂತ್ರಿ ತುಳುವ ನರಸಾನಾಯಕನೇ ಸಿಂಹಾಸನವನ್ನು ಅಲಂಕರಿಸುತ್ತಾನೆ.

ತುಳುವ ವಂಶದಲ್ಲಿ ಅದರಲ್ಲೂ ವಿಜಯನಗರದ ಆಳ್ವಿಕೆಯಲ್ಲಿ ಅತ್ಯಂತ ಪ್ರಸಿದ್ಧನಾದ ಕೃಷ್ಣದೇವರಾಯ ಸಾಮ್ರಾಜ್ಯಸೂತ್ರವನ್ನು ಸಮರ್ಥವಾಗಿ ನಿರ್ವಹಿಸಿದ. ಇವನ ಕಾಲದಲ್ಲಿಯೇ ವಿಜಯನಗರ ಸಾಮ್ರಾಜ್ಯದ ಕೀರ್ತಿಪತಾಕೆ ಗಗನಕ್ಕೇರಿತು. ಇವನ ತರುವಾಯ ಅಚ್ಯುತರಾಯ, ವೆಂಕಟಾದ್ರಿ, ರಂಗರಾಯ, ಸದಾಶಿವರಾಯರು ಒಬ್ಬೊಬ್ಬರಾಗಿ ಪಟ್ಟಕ್ಕೆ ಏರುತ್ತಾರೆ. ಶಿಲ್ಪಕಲೆಯ ಸುಗ್ಗಿ ನಡೆದುದು ಈ ಅವಧಿಯಲ್ಲಿಯೇ. ಅಂದರೆ

ಸದಾಶಿವರಾಯನ ಕಾಲದಲ್ಲಿ. ಇವನ ಆಳ್ವಿಕೆಯ ಕಾಲದಲ್ಲಿಯೇ ಕ್ರಿ. ಶ. ೧೫೬೫ರಲ್ಲಿ ತಾಳಿಕೋಟೆ ಯುದ್ಧ ಘಟಿಸಿ ವಿಜಯನಗರ ಸಾಮ್ರಾಜ್ಯದ ಉನ್ನತಿ ಅವನತಿಗಿಳಿಯಿತು. ಮುಸಲ್ಮಾನರು ರಾಜಧಾನಿಯನ್ನು ಮುತ್ತಿಗೆ ಹಾಕಿ, ಸುಮಾರು ಆರು ತಿಂಗಳ ಕಾಲ ಲೂಟಿ ಹೊಡೆದರು. ಹಿಂದೂಧರ್ಮ-ಸಾಮ್ರಾಜ್ಯದ ವಿರುದ್ಧ ಸತತವೂ ಕತ್ತಿಮಸೆಯುತ್ತಿದ್ದ ಅವರು ಹಿಂದೂಧರ್ಮದ ಪ್ರತೀಕಗಳಾಗಿದ್ದ ದೇವಾಲಯಗಳನ್ನು ಹಾಳುಗೆಡವಲು ಸಾಮಾನ್ಯ ಪ್ರಯತ್ನ ಸಾಲದೆ ಅವುಗಳಿಗೆ ಬೆಂಕಿಯನ್ನೂ ಇಟ್ಟರು. ಪರಿಣಾಮವಾಗಿ ಎಷ್ಟೋ ದೇವಾಲಯಗಳ ಮೇಲ್ಭಾವಣಿಗಳು ಉರಿಯ ಕಿಚ್ಚಿಗೆ ಸಿಡಿದು ಹೋಗಿವೆ. ಅಂತಹವುಗಳೆಂದರೆ ವಿಠಲ ಹಾಗೂ ಅಚ್ಯುತ ಗುಡಿಗಳೂ ಅವುಗಳ ಸುತ್ತಲಿನ ಗುಡಿಗಳೇ ಆಗಿವೆ. ಸುದೈವದಿಂದ ದೇವರ ದರ್ಶನಪಥ ಹಾಳಾಗಿದೆಯೇವಿನ ವಿಠಲನ ಗುಡಿಯಲ್ಲಿ ಪಕ್ಕದ ಮಂಟಪಗಳು ಇನ್ನೂ ಸುಭದ್ರವಾಗಿ ಉಳಿದಿವೆ. ಮತೀಯ ಕಿಡಿಗೇಡಿತನಕ್ಕೆ, ದ್ವೇಷಾಸೂಯೆಗಳಿಗೆ ಬಲಿಯಾಗಿ ಹಿಂದಿನ ಭವ್ಯ ಸಾಮ್ರಾಜ್ಯದ ಭವ್ಯ ಇತಿಹಾಸವನ್ನು ಕಳೆದುಕೊಂಡು ಕನ್ನಡಿಗರ ಕರ್ಮಕಥೆಯ ವ್ಯಥೆಗಳಂತೆ ಕೆಡೆದು ಮುರಿದುಬಿದ್ದಿರುವ ಹಂಪೆಯ ಭವ್ಯ ಗುಡಿಗೋಪುರಗಳ ಅವಶೇಷಗಳನ್ನು ರಕ್ಷಿಸಿಟ್ಟುಕೊಳ್ಳುವ ಪ್ರಯತ್ನ ಇಂದು ಅತ್ಯಾವಶ್ಯಕವಾಗಿದೆ. ಮೂಲದ ಭವ್ಯತೆಯ ನೋಟ ನಮಗಿಂದು ಸಾಧ್ಯವಿಲ್ಲದಿದ್ದರೂ ಉಳಿದುಬಂದಿರುವ ಅವಶೇಷಗಳಿಂದಲೇ ಅವುಗಳ ಪರಿಚಯ ಪುಟಗಳನ್ನು ಮುಂದೆ ನೋಡೋಣ.

ಹಂಪೆಯಲ್ಲಿ ಅನೇಕ ಪುರಗಳಿವೆ. ವಿಜಯನಗರದ ಕಾಲಕ್ಕೆ ಒಂದೊಂದು ಭಾಗವನ್ನೂ ಪುರ ಇಲ್ಲವೇ ಊರು ಎಂದು ಕರೆಯುತ್ತಿದ್ದರು. ಅಂದರೆ ವಿರೂಪಾಕ್ಷ ಗುಡಿ ಇದ್ದ ಭಾಗ ವಿರೂಪಾಕ್ಷತೀರ್ಥ ಅಥವಾ ವಿರೂಪಾಕ್ಷಪುರವೆಂದೂ, ಕೃಷ್ಣಗುಡಿ ಇದ್ದ ಭಾಗ ಕೃಷ್ಣಾಪುರವೆಂದೂ, ವಿಠಲಗುಡಿಯ ಭಾಗ ವಿಠಲಾಪುರವೆಂದೂ, ಅಚ್ಯುತಗುಡಿಯ ಭಾಗ ಅಚ್ಯುತಾಪುರವೆಂದೂ ಕರೆಸಿಕೊಳ್ಳುತ್ತಿದ್ದವು. ಹಂಪೆಗೆ ಏಳುಸುತ್ತಿನ ಕೋಟೆ ಇತ್ತೆಂದು ಪರ್ಶಿಯಾ ರಾಯಭಾರಿ ಅಬ್ದುರ್‌ರಜಾಕನು ಹೇಳಿದರೆ, ಕೋಟೆ ಮೊದಲಿಗೆ ಮೂರು ಸುತ್ತಿನದಿದ್ದು, ಅನಂತರದ ಕೋಟೆಯ ಮೂರು ಗೋಡೆಗಳು ಅರಮನೆಯ ಹತ್ತಿರ ಇರುವ ನಾಲ್ಕನೆಯ ಗೋಡೆಗೆ ಬಂದು ಕೂಡುತ್ತವೆ ಎಂದು ಪಾಯೆಸ್ ಹೇಳುತ್ತಾನೆ. ನಾವು ಈಗ ಒಂದೊಂದೇ ಪುರಗಳನ್ನು ನೋಡುತ್ತ ಅಲ್ಲಿರುವ ಶಿಲ್ಪ ಮಂದಿರಗಳ ಬಗೆಗೆ ಹೇಳೋಣ.

ಹಂಪೆಯ ಅತ್ಯಂತ ಪ್ರಾಚೀನ ವಿಭಾಗವೆಂದರೆ ವಿರೂಪಾಕ್ಷತೀರ್ಥ. ಈ ದೇವಾಲಯವನ್ನು ಕುರಿತು ಮೊದಲಿಗೆ ಕ್ರಿ.ಶ.೯೮೮ರ ಶಾಸನವೊಂದು ಹೇಳುತ್ತದೆ. ಇದು ಚಾಲುಕ್ಯ ಆಹವಮಲ್ಲನ ಕಾಲವಾಗಿದೆ. ಈ ದೇವಾಲಯದಲ್ಲಿ ದೊರೆಯುವ ಕ್ರಿ.ಶ.೧೧೯೯ರ ಶಾಸನದ ಮೇರೆಗೆ ಇಲ್ಲಿ ವಿರೂಪಾಕ್ಷ ದೇವಾಲಯವಲ್ಲದೇ, ಹಂಪಾದೇವಿ, ಭೈರವಗೃಹ ಹಾಗೂ ಬ್ರಹ್ಮೇಶ ಸದನಗಳಿದ್ದವು. ಈ ಗುಡಿಯ ಬಲಕ್ಕೆ ಸತ್ರ (ಈಗಲೂ ಇದೆ) ಹಾಗೂ ಹಿಂದೆ

ರಾಚಮಲ್ಲೇಶ್ವರನ ಗುಡಿ ಇದ್ದುವೆಂದೂ ತಿಳಿದುಬರುವುದು. ವಿದ್ಯಾರಣ್ಯರ ಅಪ್ಪಣೆಯಂತೆ ಮೊದಲನೆಯ ಹರಿಹರ ಈ ಗುಡಿ ಕಟ್ಟಿಸಿದನೆಂಬ ಸಂಗತಿಯಿದೆ. ಆದರೆ ಮೇಲಿನ ಶಾಸನಗಳಿಂದ ಇದು ನಂಬಲರ್ಹವಲ್ಲ. ಮೇಲಿಂದ ಮೇಲೆ ಜೀರ್ಣೋದ್ಧಾರ ಹೊಂದಿ ಈಗಿನ ಸ್ಥಿತಿ ಪಡೆದುಕೊಂಡ ಈ ದೇವಾಲಯ ಕೃಷ್ಣ ದೇವರಾಯನ ಕಾಲದಿಂದಲೂ ಹೆಚ್ಚುಕಡಿಮೆ ಇದೇ ಸ್ಥಿತಿಯಲ್ಲಿದ್ದಿತು ಎಂದು ಪಾಯೆಸ್‌ನಿಂದ ತಿಳಿದು ಬರುವುದು.

ವಿರೂಪಾಕ್ಷ ದೇವಾಲಯ ತುಂಗಭದ್ರಾ ನದಿಯ ದಕ್ಷಿಣ ದಂಡೆಯ ಮೇಲೂ ಹೇಮಕೂಟದ ಉತ್ತರಕ್ಕೂ-ಇವೆರಡರ ಮಧ್ಯೆ ಇದೆ. ಇದರ ಪೂರ್ವಕ್ಕೇ ಮಾತಂಗಪರ್ವತ. ಈ ಗುಡಿಗೆ ಎರಡು ಆವರಣಗಳು. ಒಂಬತ್ತು ಅಂತಸ್ತುಳ್ಳ ಮೊದಲ ಗೋಪುರವನ್ನು ಬಿಷ್ಟಪಯ್ಯ ಗೋಪುರ ಎಂದು ಕರೆಯುತ್ತಾರೆ. ಎರಡನೆಯ ಹರಿಹರನ ಕಾಲದಲ್ಲಿ ರಚಿತವಾದ ವಿರೂಪಾಕ್ಷ ವಸಂತೋತ್ಸವ ಚಂಪುವಿನಲ್ಲಿ "ಶ್ರೀ ವಿಷ್ಟಪೇಶಗುರು ಗೋಪುರ" ಎಂದು ಇದು ವರ್ಣಿತವಾಗಿದೆ. ಆದರೆ ಎನ್. ವೆಂಕಟರಮಣಯ್ಯ ಹಾಗೂ ನೀಲಕಂಠ ಶಾಸ್ತ್ರಿಗಳು ಇಮ್ಮಡಿ ದೇವರಾಯನ ಕಾಲಕ್ಕೆ ಬಂದ ಪ್ರೋಳುಗುಂಟಿ ತಿಮ್ಮ ಈ ಗೋಪುರ ಕಟ್ಟಿಸಿದನೆಂದು ನರಸಿಂಹ ಪುರಾಣದಿಂದ ಹೇಳುತ್ತಾರೆ. ಇವೆರಡೂ ಸಾಹಿತ್ಯಾಧಾರಗಳಾದುದರಿಂದ ಶಾಸನಾಧಾರವಿಲ್ಲದೆ ಯಾವುದೇ ನಿರ್ಣಯ ಈ ಬಗ್ಗೆ ನೀಡುವುದು ಕಷ್ಟ. ಏನೇ ಇರಲಿ, ವಿರೂಪಾಕ್ಷಗುಡಿಯ ಮಹಾರಂಗಮಂಟಪದ ಎದುರು ನಿಂತಿರುವ ಶಾಸನದ ಪ್ರಕಾರ ಕೃಷ್ಣದೇವರಾಯ ಮುಂದಿನ ಹಿರಿಯ ಗೋಪುರವನ್ನು ಕ್ರಿ.ಶ.

೧೫೧೦ರಲ್ಲಿ ಜೀರ್ಣೋದ್ಧಾರಗೊಳಿಸಿದನೆಂದು ತಿಳಿಯುತ್ತದೆ. ಈ ಗೋಪುರದ ಕೆಳಗಿನ ಎರಡು ಪಂಕ್ತಿಗಳು ಕಲ್ಲಿನ ರಚನೆಯಾಗಿ ಉಳಿದ ಭಾಗ ಇಟ್ಟಿಗೆಯಿಂದ ನಿರ್ಮಿತವಾಗಿದೆ. ತಿಳಿಗಚ್ಚಿನ ಮೂರ್ತಿಗಳು ಗೋಪುರವನ್ನು ಅಲಂಕಾರಗೊಳಿಸಿವೆ. ಈ ರಚನೆಯ ಮೇಲಿಂದಲೂ ಇದು ಏಕಕಾಲಕ್ಕೆ ಕಟ್ಟಿದ ಗೋಪುರವಲ್ಲ ಎಂದು ತಿಳಿಯಬಹುದು.

ಪೂರ್ವಕ್ಕಿರುವ ಈ ಗೋಪುರದಿಂದ ಒಳಪ್ರವೇಶವಾದರೆ ಮೊದಲ ಆವರಣದಲ್ಲೇ ಅನೇಕ ಮಂಟಪಗಳೂ ಗುಡಿಗಳೂ ಇವೆ. ಬಲಕ್ಕೆ ಫಲಪೂಜಾ ಮಂಟಪವಿದೆ. ಇದು ಯಾವ ಕಾಲಕ್ಕೆ ಕಟ್ಟಿದುದು ಎಂಬುದು ತಿಳಿಯದು. ಪಾಕಶಾಲೆಯಿಂದ ಬಂದ ಕಲ್ಲು ಕಾಲುವೆ ಈ ಆವರಣದ ಹಾಸುಗಲ್ಲಿನ ಕೆಳಗೆ ಹಾಯ್ದು ಮುಂದೆ ಮನ್ಮಥಕುಂಡವನ್ನು ಕೂಡುತ್ತದೆ. ವಿರೂಪಾಕ್ಷ ದೇವಾಲಯದ ಹಿಂದೆ ಸುಮಾರು ಒಂದೂವರೆ ಕಿಲೋಮೀಟರು ಸಾಗಿದರೆ ಹಿರಿಯ ಕಾಲುವೆ ಬಳಿ ಇದರ ಮೂಲವಿದೆ.

ಈ ಗೋಪುರದ ಮುಂದೆ ಇರುವ ಮೂರಂತಸ್ತಿನ ಚಿಕ್ಕ ಗೋಪುರಕ್ಕೆ ರಾಯಗೋಪುರ ಎಂದು ಕರೆಯುತ್ತಾರೆ. ಇದನ್ನು ಕ್ರಿ.ಶ. ೧೫೧೦ರಲ್ಲಿ ಕೃಷ್ಣದೇವರಾಯ ತನ್ನ ಪಟ್ಟಾಭಿಷೇಕದ ಸಮಯದಲ್ಲಿ ಕಟ್ಟಿಸಿದ. ಇದರೊಳಗಿಂದ ಬಂದರೆ ಎರಡು ಕಂಬಗಳು ಕಾಣುವವು. ಕೃಷ್ಣದೇವರಾಯನ ಕಾಲಕ್ಕೆ ಬಂದಿದ್ದ ಪೋರ್ತುಗೀಜ ವ್ಯಾಪಾರಿ ಪಾಯೆಸ್ 'ಇಲ್ಲಿ ನಾಲ್ಕು ಕಂಬಗಳಿದ್ದು ಬಾಗಿಲಿನ ಸಮೀಪಕ್ಕೆ ಇರುವ ಕಂಬ ಈಗ ಆಳುತ್ತಿರುವ ಅರಸು

ಕೊಟ್ಟದ್ದು' ಎಂದು ಬರೆದಿದ್ದಾನೆ. ಬಹುಶಃ ಕೃಷ್ಣದೇವರಾಯ ನಿಲ್ಲಿಸಿದ ಕಂಬ ಬಿದ್ದುಹೋಗಿದೆ. ಮತ್ತೊಂದೂ ಬಿದ್ದುಹೋಗಿರುವ ಗುರುತು ಕಾಣುತ್ತದೆ. ಈಗ ನಿಂತಿರುವ ಕಂಬಗಳಲ್ಲಿ ಒಂದಕ್ಕೆ ತಾಮ್ರದ ಹಾಗೂ ಇನ್ನೊಂದಕ್ಕೆ ಹಿತ್ತಾಳೆಯ ಹೊದಿಕೆಗಳಿವೆ.

ನಂದಿ ಮಂಟಪದಿಂದ ಮುಂದೆ ಹೋಗಿ ಮಹಾರಂಗಮಂಟಪ ಪ್ರವೇಶ ಮಾಡಬಹುದು. ಹಾಗೂ ಪೂರ್ವ, ಉತ್ತರ, ದಕ್ಷಿಣಕ್ಕಿರುವ ಸೋಪಾನಗಳಿಂದಲೂ ಮಂಟಪ ಪ್ರವೇಶವಾಗುತ್ತದೆ. ಈ ಮಂಟಪದಲ್ಲಿ ಸಂಯುಕ್ತ ಅಥವಾ ಮಿಶ್ರ ಕಂಬಗಳಿವೆ. ಇವಕ್ಕೆ ಹೊಂದಿಕೊಂಡ ಗಜ ಸಿಂಹಗಳು ತಮ್ಮ ಹಿಂಗಾಲುಗಳ ಮೇಲೆ ಎದ್ದುನಿಂತಿವೆ. ಇವುಗಳ ಸವಾರರು ಯುದ್ಧಸನ್ನದ್ಧರಾಗಿರುವಂತೆ ಅಥವಾ ಜಯಭೇರಿ ಹೊಡೆದು ಬಂದವರಂತೆ ಕಾಣುತ್ತಾರೆ. ಮಂಟಪದ ನಾಲ್ಕು ಮೂಲೆಗೂ ಇಂತಹ ಒಂದೊಂದು ಕಂಬಗಳಿವೆ. ಇವುಗಳ ಮಧ್ಯದ ಕಂಬಗಳಲ್ಲಿರುವ ಗಜ ಸಿಂಹಗಳು ಹಿಂಗಾಲುಗಳ ಮೇಲೆ ನಿಂತಿದ್ದು ಮುಂಗಾಲುಗಳಿಂದ ಪಣತೆ ಹಿಡಿದುಕೊಂಡಂತೆ ಇವೆ. ವಿಜಯನಗರದ ವೈಭವದ ಕಾಲದಲ್ಲಿ ಪ್ರತಿನಿತ್ಯವೂ ಸುಮಾರು ಎರಡೂವರೆ ಸಾವಿರದಿಂದ ಮೂರು ಸಾವಿರದ ವರೆಗೆ ಹಣತೆ ಬೆಳಗಿಸುತ್ತಿದ್ದರೆಂದು ಪಾಯೆಸ್ ಹೇಳುತ್ತಾನೆ.

ಮಹಾಮಂಟಪದ ಮಾಳಿಗೆಯ ಒಳಮೈ ಮೇಲೆ ವರ್ಣಚಿತ್ರವನ್ನು ಬಿಡಿಸಲಾಗಿದೆ. ಪೂರ್ವಭಾಗದಲ್ಲಿ ಮೆರವಣಿಗೆ ಹೊರ

ಟಿರುವ ಯತಿಯೊಬ್ಬನ ಚಿತ್ರವನ್ನು ಕೆಲವರು ವಿದ್ಯಾರಣ್ಯರೆಂದೂ ಮತ್ತೆ ಕೆಲವರು ವ್ಯಾಸತೀರ್ಥರೆಂದೂ ಕರೆಯುತ್ತಾರೆ. ಮಂಟಪ ನಿರ್ಮಾಣ ಕೃಷ್ಣದೇವರಾಯನ ಕಾಲದಲ್ಲಿಯಾದುದರಿಂದ ಮೆರವಣಿಗೆಯಲ್ಲಿರುವ ಯತಿಯ ಚಿತ್ರ ಬಹುಶಃ ಕೃಷ್ಣದೇವರಾಯನ ರಾಜಗುರು ವ್ಯಾಸತೀರ್ಥರೇ ಅಗಿರಬೇಕು.

ಈ ಮಂಟಪದ ಪಶ್ಚಿಮಕ್ಕೆ ಅಂದರೆ ಗರ್ಭಗೃಹದ ಪೂರ್ವ ಬಾಗಿಲಿನಿಂದ ರಂಗಮಂಟಪಕ್ಕೆ ಪ್ರವೇಶವಿದೆ. ಆದರೆ ಈ ಬಾಗಿಲನ್ನು ಯಾವಾಗಲೂ ಮುಚ್ಚಿರುತ್ತಾರೆ. ಇದರ ಪಕ್ಕದಲ್ಲಿ ಶಿಲೆಯ ದ್ವಾರಪಾಲಕರೀರ್ವರು ನಿಂತಿರುವರು. ಬಾಗಿಲಿನ ಪಕ್ಕದ ಕಲ್ಲುಗೋಡೆಯ ಮೇಲೆ ಭೂಲೋಕಕ್ಕೆ ಪುರುಷಮೃಗವನ್ನು ತರುತ್ತಿರುವ ಭೀಮನ ಮತ್ತು ರಾಮನಿಗೆ ಶಿವದರ್ಶನವನ್ನು ಕೊರೆದಿದ್ದಾರೆ.

ಉತ್ತರದ ಬಾಗಿಲಿನಿಂದ ರಂಗಮಂಟಪ ಪ್ರವೇಶಿಸಿದರೆ, ನರ್ತನರಂಗಸ್ಥಳ ಹಾಗೂ ಅದರ ನಾಲ್ಕು ದಿಕ್ಕಿಗೂ ಒಂದೊಂದು ಕಂಬಗಳಿವೆ. ಈ ಕಂಬಗಳ ಮೇಲೆ ಕೊರೆದಿರುವ ಚಿತ್ರಗಳು ವಿಜಯನಗರ ಶೈಲಿಯಲ್ಲಿವೆ. ಸಂಗೀತಗಾರನೊಬ್ಬ ಭಜನೆ ತಾಳ ಹಿಡಿದಿರುವ ಚಿತ್ರ ಅವುಗಳಲ್ಲಿ ತುಂಬ ಸುಂದರವಾಗಿದೆ.

ಈ ಮಂಟಪದ ಪೂರ್ವಗೋಡೆಯ ಮೇಲೆ ಬುಕ್ಕಮಾದೇವಿಯ ಶಾಸನವೂ, ಉತ್ತರ, ದಕ್ಷಿಣ ದ್ವಾರಗಳ ಗೋಡೆ ಮೇಲೆ ದಾನ ವಿವರವಿರುವ ಕೃಷ್ಣದೇವರಾಯನ ಕ್ರಿ.ಶ. ೧೫೧೩ರ ಶಾಸನವೂ ಇವೆ.

ಗರ್ಭಗೃಹಕ್ಕೆ ಪ್ರದಕ್ಷಿಣಾಪಥವಿದೆಯಾದರೂ ಅಲ್ಲಿಗೆ ಹೋಗಲು ಅರ್ಚಕರು ಅವಕಾಶವೀಯುತ್ತಿಲ್ಲ. ಅಂತರಾಳಿಕ ಹಾಗೂ ರಂಗಮಂಟಪದ ನೆಲವನ್ನು ಇತ್ತೀಚೆಗೆ ಬೇರೆ ಕಲ್ಲಿನಿಂದ ಹೊದಿಸಿದ್ದಾರೆ. ಗರ್ಭಗೃಹದಲ್ಲಿ ಪ್ರತಿಷ್ಠಾಪಿತವಾಗಿರುವ ಲಿಂಗವೇ ಹೇಮಕೂಟನಿವಾಸಿಯಾದ ಪಂಪಾವಿರೂಪಾಕ್ಷ. ಪಂಪಾಮಹಾತ್ಮ್ಯದ ಪ್ರಕಾರ ಪಂಪಾದೇವಿಯ ತಪಸ್ಸಿಗೆ ಶಿವ ಮೆಚ್ಚಿ, ಅವಳನ್ನು ವರಿಸಿ ಇಲ್ಲಿಯೇ ನೆಲೆನಿಂತ ನೆನಪಿಗಾಗಿ ಈ ಕ್ಷೇತ್ರಕ್ಕೆ ಅಂದಿನಿಂದ ಪಂಪಾಕ್ಷೇತ್ರ ಎಂಬ ಹೆಸರು ಬಂದಿತು.

ವಿರೂಪಾಕ್ಷ ಗುಡಿಯ ಹೊರಗೋಡೆಯ ಮೇಲೆ ವಿಜಯನಗರ ಶೈಲಿಯಲ್ಲಿ ಚಿತ್ರಗಳನ್ನು ಕೊರೆಯಲಾಗಿದೆ. ಎರಡನೆಯ ಪ್ರಾಕಾರವನ್ನು ಕಂಬಗಳ ಸಾಲುಳ್ಳ ಅಂಗಣ ಅಥವಾ ಜಗಲಿ ಸುತ್ತುವರಿದಿದೆ. ಈ ಅಂಗಣಕ್ಕೆ ಹತ್ತಿಕೊಂಡು ಅನೇಕ ದೇವಾಲಯಗಳು ನಿರ್ಮಾಣವಾಗಿವೆ.

ರಾಜಗೋಪುರದಿಂದ ಒಳಪ್ರವೇಶವಾದರೆ ಎಡಕ್ಕೆ ಸೂರ್ಯನಾರಾಯಣ, ಮುಕ್ತಿನರಸಿಂಹ, ಪಾತಾಳೇಶ್ವರ, ಬಲಕ್ಕೆ ಲಕ್ಷ್ಮೀನರಸಿಂಹ, ಮಹಿಷಾಸುರಮರ್ದಿನಿ ಮುಂತಾದ ಮೂರ್ತಿಗಳ ಶಿಲಾಮಂದಿರಗಳಿವೆ. ಎಡಬದಿಯಲ್ಲಿ ಮುಂದುವರಿದರೆ ನವದುರ್ಗೆಯರೆಂದು ಕರೆಯುವ ಗುಡಿಯಿದೆ. ಆದರೆ ಇವು ಚಾಲುಕ್ಯರು ಆರಾಧಿಸುತ್ತಿದ್ದ ಸಪ್ತಮಾತೃಕೆಯರ ಗುಡಿಗಳು. ಸಪ್ತಮಾತೃಕೆಯರ ಸಾಲಿನ ಇಕ್ಕೆಲದಲ್ಲಿ ವೀರಭದ್ರ ಮತ್ತು ಗಣಪತಿ ವಿಗ್ರಹಗಳಿವೆ. ಇದೇ ಮೊಗಸಾಲೆಯ ಪಶ್ಚಿಮ ಮೂಲೆಯಲ್ಲಿ ಸರಸ್ವತಿ

ಮಂದಿರವಿದೆ. ಸರಸ್ವತಿ ಪುಸ್ತಕ, ವೀಣಾಪಾಣಿಯಾಗಿದ್ದಾಳೆ. ಇಲ್ಲಿಂದ ಮುಂದೆ ಹೋದರೆ ಎಂಟು ಅಥವಾ ಹತ್ತು ಕೈಯುಳ್ಳ ಮಹಿಷಾಸುರಮರ್ದಿನಿ ಮೂರ್ತಿ ಇದೆ. ಪಾಯೆಸ್ ಇಲ್ಲಿ ನೋಡಿ ಹೇಳಿದ ಆರು ಕೈಯುಳ್ಳ ಮೂರ್ತಿ ಈಗ ಇಲ್ಲ. ಎಂಟು ಕೈಯುಳ್ಳ ಮೂರ್ತಿ ಮಾತ್ರ ಇಲ್ಲಿದೆ. ಇಲ್ಲಿಂದ ಪಶ್ಚಿಮಕ್ಕೆ ಇರುವುದೇ ವಿದ್ಯಾರಣ್ಯರ ಗುಡಿ.

ವಿರೂಪಾಕ್ಷದೇವರ ಉತ್ತರಕ್ಕೆ ಪಂಪಾದೇವಿ ಹಾಗೂ ಭುವನೇಶ್ವರಿಯ ಮಂದಿರಗಳಿವೆ. ಈ ಮೂರ್ತಿಶಿಲ್ಪಗಳು ಕಲ್ಯಾಣ ಚಾಲುಕ್ಯ ಶಿಲ್ಪಶೈಲಿಯನ್ನು ಹೋಲುತ್ತವೆ. ಭುವನೇಶ್ವರಿಯ ಗರ್ಭಗೃಹದ ಮೇಲ್ಛಾವಣಿಯ ಮೇಲೆ ಇರುವ ನವಗ್ರಹಗಳ ಕೆತ್ತನೆ ತುಂಬಾ ಸುಂದರವಾಗಿದೆ. ಗರ್ಭಗೃಹದ ಬಾಗಿಲುಗಳ ಮೇಲೆ ಬೆರಗುಗೊಳಿಸುವ ಕುಸುರಿ ಕೆಲಸ ನಡೆದಿದೆ. ಇಲ್ಲಿ ಸೋಪಾನ ಇಳಿದು ಕೆಳಗೆ ಹೋದರೆ ಗುಲಗಂಜಿ ಮಾಧವಗುಡಿ ಇದೆ. ಗುಲಗಂಜಿ ಮಾಧವ ಸುಂದರವಾದ ಮೂರ್ತಿಶಿಲ್ಪ. ಈ ಮಂದಿರ ಪ್ರಾಚೀನವಾದುದು ಎಂಬುದಕ್ಕೆ ಇಲ್ಲಿಯ ಕಂಬಗಳ ಶೈಲಿಯೇ ಸಾಕ್ಷಿ ನುಡಿಯುತ್ತದೆ.

ಇಲ್ಲಿಂದ ಹೊರಬಂದರೆ ನಮ್ಮ ಕಣ್ಣಿಗೆ ಬೀಳುವುದು ಚತುರ್ಭುಜ ಮಹಿಷಾಸುರಮರ್ದಿನಿ ಹಾಗೂ ಹೇಮಗರ್ಭ ಗಣಪತಿಯಿರುವ ಕನಕಗಿರಿ ಗೋಪುರ. ಈ ಗೋಪುರದಿಂದ ನದೀಮುಖವಾಗಿ ಕ್ರಮಿಸಿದರೆ ಮೊದಲು ಬಲಕ್ಕೆ ಕಾಣಿಸುವುದು ಮನ್ಮಥ ಕುಂಡ. ಇದು ಶಿವನ ಮುಖದಿಂದ ಬಂದುದರಿಂದ-ಮತ್ + ಮುಖ,

ಮನ್ + ಮುಖ ಆಗಿದ್ದು, ಈಗ ಮನ್ಮಥಕುಂಡವಾಗಿದೆಯೆಂದು ಹೇಳುತ್ತಾರೆ. ಪಂಪಾದೇವಿಯ ಫಲಪೂಜೋತ್ಸವದ ದಿನ ಈ ಕುಂಡದಲ್ಲಿ ತೆಪ್ಪವನ್ನು ತೇಲಿಬಿಡುತ್ತಾರೆ. ಈ ಕುಂಡದ ಎದುರು ಷಣ್ಮುಖಸ್ವಾಮಿ, ದುರ್ಗಾದೇವಿಯಲ್ಲದೇ ಅನೇಕ ಶಿವಮಂದಿರಗಳೂ ಇವೆ. ದುರ್ಗಾದೇವಿಯ ಗುಡಿಯಲ್ಲಿ ಕ್ರಿ.ಶ. ೧೧೯೯ರ ಶಿಲಾಶಾಸನವಿದೆ. ಇಲ್ಲಿರುವ ಅನೇಕ ಗುಡಿ ಮಂಟಪಗಳಲ್ಲಿ ಮೂರ್ತಿಯಿಲ್ಲದ್ದರಿಂದ ಈಗ ಜನರು ವಾಸಿಸುತ್ತಿದ್ದಾರಲ್ಲದೇ ದನಕರುಗಳನ್ನೂ ಕಟ್ಟುತ್ತಿದ್ದಾರೆ. ರಾಜಮಲ್ಲ ಬ್ರಹ್ಮೇಶ ಸದನ ಮುಂತಾದವು ಇಲ್ಲಿಯೇ ಇದ್ದಿರಬೇಕು. ಆದರೆ ಅವು ಈಗ ಕಂಡುಬರುತ್ತಿಲ್ಲ.

ಉತ್ತರದ ಗೋಪುರದಿಂದ ಹೊರಬಿದ್ದರೆ ಪೂರ್ವಾಭಿಮುಖವಾಗಿರುವ ಚಿಕ್ಕದಾರಿಯೊಂದಿದೆ. ಇದು ಪೂರ್ವದ ಮಹಾಗೋಪುರದ ಹತ್ತಿರ ಕೂಡುತ್ತದೆ. ಈ ದಾರಿಯಲ್ಲಿ ಮಾತಂಗ ಪರ್ವತಾಭಿಮುಖವಾಗಿ ಹೊರಟರೆ ಪಾಯೆಸ್ ವರ್ಣಿಸಿದ ಬೀದಿಗೆ ಬರುತ್ತೇವೆ. ಈ ಬೀದಿಯ ಇಕ್ಕೆಲಗಳಲ್ಲೂ ಇರುವ ಮಂಟಪಗಳು ಆಗಿನ ಕಾಲಕ್ಕೆ ಪ್ರವಾಸಿಗಳ ವಾಸಸ್ಥಾನವಾಗಿದ್ದುವು. ಆದರೆ ಈ ಮಂಟಪಗಳು ಇಂದಿನವರ ವಾಸಗೃಹಗಳಾಗಿವೆ. ಪೂರ್ವಕ್ಕೆ ಎಡಬದಿಯ ಚಿಕ್ಕದಾರಿಯಲ್ಲಿ ನಡೆದರೆ ಸುಂದರ ಮನೆಯೊಂದಿದೆ. ಅನಂತರ ದೊಡ್ಡದೊಂದು ಮಂಟಪ, ಅದರ ಮಧ್ಯೆ ಉತ್ಸವಮಂಟಪ ಇದೆ. ಅವು ಈಗ ದನಕರುಗಳ ವಿಶ್ರಾಂತಿಗೃಹಗಳಾಗಿಬಿಟ್ಟವೆ. ಮಂಟಪ ನಿಜಕ್ಕೂ ಒಂದು ಸುಂದರ ನಿರ್ಮಾಣವಾಗಿದೆ.

ಮೊದಲಿನಂತೆಯೇ ನಾವು ರಾಜಬೀದಿಯಲ್ಲಿ ಮಾತಂಗ ಪರ್ವತಾಭಿಮುಖವಾಗಿ ಸಾಗಿದರೆ, ಪರ್ವತಕ್ಕೆ ಅನತಿ ದೂರದಲ್ಲಿ ಎಡಕ್ಕೆ ಚಿಕ್ಕ ಅಂತಸ್ತಿನ ಸುಂದರ ಗೃಹವೊಂದಿದೆ. ಪಾಯೆಸ್ ಹೇಳುವಂತೆ, ಬಹುಶಃ ಇದು ಕೃಷ್ಣದೇವರಾಯನ ತಂಗುದಾಣ ಇದ್ದಿರಬಹುದು. ಈ ಗೃಹದ ಪಕ್ಕಕ್ಕೆ ಛತ್ರದಂತಿರುವ ಮಂಟಪ ವಿದೆ. ಬಹುಶಃ ಇದು ಅರಮನೆಯೇ ಆಗಿರಬಹುದೆಂಬ ಸಂಶಯ ಮೂಡುತ್ತದೆ. ಇದರ ಎದುರಿಗೆ ಚಾಲುಕ್ಯ ಶೈಲಿಯಲ್ಲಿ ಕಟ್ಟಿದ ಛತ್ರವಿದೆ. ಈ ಛತ್ರದ ಕಂಬಗಳು ವಿಜಯನಗರ ಶೈಲಿಯಂತೆ ಚಚ್ಚೌಕವಾಗಿರದೇ ದುಂಡಗಿನ ರಚನೆಯಾಗಿವೆ. ಮಂಟಪದ ಹಿಂದೆ ಮಹಾನಂದಿ ಮೂರ್ತಿ ಇದೆ. ವಿಜಯನಗರದ ಕಾಲಕ್ಕೆ ವಿರೂಪಾಕ್ಷದೇವರ ಉತ್ಸವ ರಥವನ್ನು ಇಲ್ಲಿಯ ವರೆಗೂ ಎಳೆದು ತರುತ್ತಿದ್ದರು. ಈಗಲೂ ಅದೇ ರೂಢಿಯಿದೆ.

ಇಲ್ಲಿಂದ ಮೂರು ದಾರಿಗಳು ಒಡೆದಿವೆ. ಎಡಕ್ಕಿರುವ ದಾರಿ ನದೀತೀರದ ಮೇಲಕ್ಕೂ ಬಂಡೆಗಲ್ಲುಗಳ ಕೆಳಗೂ ಮಂಟಪಗಳ ಮೂಲಕವೂ ಕೋದಂಡರಾಮನ ದೇವಸ್ಥಾನಕ್ಕೂ ಅಲ್ಲಿಂದ ವಿಠಲಗುಡಿಯ ದಾರಿಗೆ ಸೇರುತ್ತದೆ. ಮಧ್ಯದ ದಾರಿ ಅಚ್ಯುತನ ಗುಡಿಗೆ ಒಯ್ಯುತ್ತದೆ. ಅಲ್ಲಿಂದ ಅಚ್ಯುತಾಪೇಟೆಯ ಮಾರ್ಗ ವಾಗಿ ವಿಠಲಕ್ಕೂ ಕರೆದೊಯ್ಯುತ್ತದೆ. ಮತ್ತೊಂದು ದಾರಿ ಮಾತಂಗಪರ್ವತಕ್ಕೆ ಕೊಂಡೊಯ್ಯುತ್ತದೆ. ಈ ಮಾರ್ಗದ ಸೋಪಾನ ಪಂಕ್ತಿಗಳು ಏಕಸೂತ್ರವಾಗಿಲ್ಲ. ಆಳೆತ್ತರದ ಸೋಪಾ ನಗಳೂ ಇರುವುದರಿಂದ ಈ ಮಾರ್ಗಕ್ರಮ ಅಷ್ಟು ಸುಲಭ ವಾದುದಲ್ಲ. ಅಚ್ಯುತರಾಯನ ಗುಡಿಯ ಹಿಂದಿರುವ ಮಾರ್ಗ

ದಲ್ಲಿ ಕ್ರಮಿಸಿದರೆ ಹಿರಿಯ ಕಾಲುವೆ ಹಾಗೂ ತುರತ್ತ ಕಾಲುವೆ ಗಳಿವೆ. ಇವುಗಳ ಪಕ್ಕದ ಸೋಪಾನಗಳಿಂದ ಈ ಪರ್ವತ ಏರು ವುದು ಅಷ್ಟು ಶ್ರಮದಾಯಕವಲ್ಲ. ಮಾತಂಗ ಪರ್ವತ ಕಣ್ಮನ ಗಳಿಗೆ ಹಬ್ಬವನ್ನೀಯುತ್ತದೆ. ಪರ್ವತಾಗ್ರದಿಂದ ಕಣ್ಣು ಹರಿಯ ಬಿಟ್ಟರೆ ಒಂದೆಡೆ ವಿರೂಪಾಕ್ಷಪುರ, ಇನ್ನೊಂದೆಡೆ ಕೃಷ್ಣಾಪುರ, ಮತ್ತೊಂದೆಡೆ ಅಚ್ಯುತಾಪುರ, ವಿಠಲಾಪುರ, ಕಣ್ಣಿಗೆ ಕಾಣುವ ಅಂತರದಲ್ಲಿ ಅಂತ ಪುರ ಅಥವಾ ವೀರಬಲ್ಲಾಳನ ಹೊಸ ಪಟ್ಟಣ ಕಣ್ಮನಗಳನ್ನು ತಣಿಸುತ್ತವೆ. ಈ ನೋಟ ಅತ್ಯಾ ಕರ್ಷಕವಾದುದು. ಪರ್ವತಾಗ್ರದಿಂದ ಇಡೀ ವಿಜಯ ನಗರದ ಪಕ್ಷಿನೋಟ ನಮಗಾಗುತ್ತದೆ. ಪಾಯೆಸ್ ಸಹ ಬಹುಶ ಒಮ್ಮೆ ಇದೇ ಪರ್ವತವನ್ನೇರಿ ವಿಜಯನಗರವನ್ನು ಕಣ್ಣಾರೆ ಕಂಡು ಮನಸಾರೆ ತಣಿದು ಅದನ್ನು ರೋಮ್‌ನಗರಕ್ಕೆ ಹೋಲಿ ಸಿದ್ದಾನೆ.

ಮಾತಂಗಪರ್ವತದ ಮೇಲೆ ಸಂಗಮ ಅರಸರ ಕಾಲದ ವೀರಭದ್ರ ಅಥವಾ ವೀರೇಶ ಮಂದಿರವಿದೆ. ಪಂಪಾಸ್ಥಾನ ವರ್ಣನೆಯಲ್ಲಿ ಇದರ ಉಲ್ಲೇಖವಿದೆ. ಅಲ್ಲದೆ ಮಾಹಾತ್ಮ್ಯೆ ದಲ್ಲಿಯೂ ಉಲ್ಲೇಖವಾಗಿದೆ. ಇದಲ್ಲದೆ ಮತ್ತೊಂದು ವೀರಭದ್ರ ದೇವರ ಮೂರ್ತಿಯೂ ಇಲ್ಲಿದೆ. ನನಗೆ ತಿಳಿದಂತೆ ಈ ಪರ್ವತದಲ್ಲಿ ನಾಲ್ಕು ಶಾಸನಗಳಿವೆ. ಈ ವರೆಗೆ ಯಾರೂ ಇವನ್ನು ಬೆಳಕಿಗೆ ತಂದಿಲ್ಲ. ಇವುಗಳ ಸಹಾಯದಿಂದ ಗುಡಿಯ ಬಗೆಗೆ ವಿಶೇಷ ಬೆಳಕು ಮೂಡಿಸಲು ಸಾಧ್ಯವಿದೆ.

ವಿರೂಪಾಕ್ಷ ದೇವಾಲಯದ ಉತ್ತರಕ್ಕೆ ಇರುವ ಕೂಟವೇ ಹೇಮಕೂಟ. ಇದು ಕೋಟೆಗೋಡೆಯಿಂದ ಸುತ್ತುವರೆಯಲ್ಪಟ್ಟು ಉತ್ತರ, ದಕ್ಷಿಣ ಹಾಗೂ ಪೂರ್ವದಿಕ್ಕುಗಳಿಂದ ಪ್ರವೇಶದ್ವಾರ ಹೊಂದಿದೆ. ಪಂಪಾಸ್ಥಾನ ವರ್ಣನೆ ಹಾಗೂ ಕುಮಾರರಾಮನ ಚರಿತ್ರೆಗಳಲ್ಲಿ ಈ ಕೋಟೆ, ಇಲ್ಲಿಯ ದೇವಾಲಯಗಳ ಮನೋಹರವಾದ ವರ್ಣನೆಯಿದೆ. ಇಲ್ಲಿರುವ ಗುಡಿಗಳು ಕಾಕತೀಯ ಶಿಲ್ಪಕಲೆಯನ್ನು ಹೋಲುತ್ತವೆ. ವಾಸ್ತುಶಿಲ್ಪದ ದೃಷ್ಟಿಯಿಂದ ಇವನ್ನು ಮೊದಲಿಗೆ ಜೈನ ಗುಡಿಗಳೆಂದು ಭಾವಿಸಿದ್ದರು. ಆದರೆ ಇಲ್ಲಿರುವ ಮೂರು ನಾಲ್ಕು ಶಾಸನಗಳು ಇವನ್ನು ಶಿವಾಲಯಗಳೆಂದೇ ಸಾರುತ್ತವೆ. ಅಲ್ಲದೇ ದೇವಾಲಯಗಳ ಶಿಲ್ಪಚಿತ್ರವೂ ಶೈವದ್ವಾರಪಾಲಕರೂ ಇವು ಶಿವಾಲಯಗಳೆಂದೇ ಸ್ಪಷ್ಟಪಡಿಸುತ್ತವೆ. ಇಲ್ಲಿರುವ ಕೆಲಗುಡಿಗಳು ಅವಳಿ ಹಾಗೂ ತ್ರಿವಳಿ ಗರ್ಭಗೃಹಗಳನ್ನು ಹೊಂದಿವೆ. ಇಲ್ಲಿಯ ಹಲವು ಗುಡಿಗಳಿಗೆ ತಳಪಾಯವೇ ಇಲ್ಲ. ಏಕೆಂದರೆ ಹೇಮಕೂಟವೇ ದೊಡ್ಡ ದೊಡ್ಡ ಬಂಡೆಗಲ್ಲುಗಳಿಂದ ನಿರ್ಮಿತವಾಗಿದೆ. ಬಂಡೆಗಲ್ಲುಗಳ ಮೇಲೆ ಕಲ್ಲು ಜೋಡಿಸಿ ಕಟ್ಟಿದ ಗುಡಿಗಳು ಆರೇಳು ಶತಮಾನಗಳಿಂದ ಸುಭದ್ರವಾಗಿ ನಿಂತಿರಬೇಕಾದರೆ ಕಟ್ಟಿದ ಶಿಲ್ಪಿಯ ಬುದ್ಧಿಮತ್ತೆ ನಮಗೆ ಉಂಟಾಗುತ್ತದೆ. ಕಂಪಿಲದೇವನ ಮಗ ಮುಮ್ಮಡಿ ಸಿಂಗೆಯನಾಯಕ ಸೌಮ್ಯಸಂವತ್ಸರ (ಕ್ರಿ.ಶ. ೧೩೦೯–೧೦)ದಲ್ಲಿ ಕಟ್ಟಿಸಿದ ಗುಡಿಯೊಂದು ಸುಂದರವಾಗಿದೆ. ಶಾಸನ ನಿಲ್ಲಿಸಿರುವ ಈ ಕಂಬ ಅನಂತರದ ಜೋಡಣೆಯಂತೆ ಭಾಸವಾದರೂ ಕಟ್ಟಡ ಶೈಲಿಯು ಅದನ್ನು ಅಲ್ಲಗಳೆಯುತ್ತದೆ.

ಹೇಮಕೂಟದ ದಕ್ಷಿಣದ್ವಾರದಿಂದ ಹೊರಬಂದು ಅನತಿದೂರ ಕ್ರಮಿಸಿದರೆ 'ಕಡಲೆಕಾಳು ಗಣೇಶ' ಎಂಬ ಹೆಸರಿನ ಎತ್ತರದ ಮೂರ್ತಿಯುಳ್ಳ ಗುಡಿಯು ದರ್ಶನವಾಗುವುದು. ಅಖಂಡ ಶಿಲೆಯಲ್ಲಿ ಕಟೆಯಲ್ಪಟ್ಟ ಈ ಮೂರ್ತಿ ನಿಜಕ್ಕೂ ಭವ್ಯ ಮನೋಹರವಾಗಿದೆ. ಈ ಗುಡಿಯ ಮಂಟಪದ ಕಂಬಗಳ ಶೈಲಿ ಸರಳ ರಚನೆಯೆನಿಸಿದರೂ ಅವುಗಳ ಮೇಲಿನ ಶಿಲ್ಪಕಲೆ ಆಕರ್ಷಕವಾಗಿದೆ. ಇನ್ನು ಆಕಾರದಲ್ಲಿ ಚಿಕ್ಕದಾದರೂ ಶ್ರೇಷ್ಠ ಕಲಾಕೃತಿಯಾಗಿದೆ ಸಾಸಿವೆಕಾಳು ಗಣಪತಿ. ಇಲ್ಲಿಂದ ಮುಂದುವರಿದರೆ ವಿಷ್ಣುಪಾದದ ಗುಡಿ. ಪಾದಗಳಿಗೆ ನಾಗ ಸುತ್ತಿಕೊಂಡಿದೆ. ಆದರೆ ಇದಕ್ಕೆ ಯಾಕೆ ವಿಷ್ಣುಪಾದ ಎಂದು ಕರೆಯುವರೋ ತಿಳಿಯದು.

ಕಡಲೆಕಾಳು ಗಣಪತಿ ಗುಡಿಯ ಹಿಂದಿರುವ ಗುಡ್ಡದಲ್ಲಿ ಒಂದು ಶಿವಾಲಯವಿದೆ. ಇದು ಸದಾಶಿವರಾಯನ ಕಾಲದ ನಿರ್ಮಾಣ ಎಂಬುದಕ್ಕೆ ಅಲ್ಲಿರುವ ಶಾಸನವೇ ಸಾಕ್ಷಿಯಾಗಿದೆ. ಈ ಶಾಸನದ ಹೊರತು ಗುಡಿ ಆಕರ್ಷಕವಾಗಿಲ್ಲ. ಗಣಪತಿ ಗುಡಿಯ ಮುಂದಿನ ಕೃಷ್ಣ ಗುಡಿಯ ಮಾರ್ಗದಲ್ಲಿ ಎಡಭಾಗಕ್ಕೆ ಸಂಪೂರ್ಣ ಶಿಲೆಯಿಂದ ರಚನೆಯಾದ ಗುಡಿಯಿದೆ. ಅದರೊಳಗೆ ವಾಸಿಸುತ್ತಿದ್ದ ಲಂಬಾಡಿಯಿಂದ ನನಗೆ ಒಳಗೆ ಹೋಗಲು ಶಕ್ಯವಾಗಲಿಲ್ಲ. ಇಮ್ಮಡಿ ಹರಿಹರನ ಕಾಲಕ್ಕೆ ಕಟ್ಟಲ್ಪಟ್ಟ ಜೈನ ದೇವಾಲಯವನ್ನು ಈ ಗುಡಿ ಹೋಲುತ್ತದೆ. ಈ ಗುಡಿಯ ಪಶ್ಚಿಮ ಗೋಡೆಯ ಮೇಲೆ ಎರಡು ಶಿಲಾಶಾಸನಗಳಿವೆ. ಈ ಮೇಲಿನ ಶಾಸನದ ಪ್ರಕಾರ

ಮುಂಜಿವೆಗೆ ಕಟ್ಟಿದ ಈ ಗುಡಿಯಲ್ಲಿ ಮರಿಬ್ರಾಹ್ಮಣರಿಗೆ (ವಟು ಗಳಿಗೆ) ಏರ್ಪಡಿಸಿದ ಸತ್ರವೊಂದಿತ್ತು.

ಕೃಷ್ಣಗುಡಿಗೆ ಹೋಗುವ ಮೊದಲು ಮತ್ತೊಂದು ದೊಡ್ಡ ದೇವಾಲಯವಿದೆ. ಈ ಪೌಳಿಯಲ್ಲಿ ಮೂರು ದೇವಾಲಯುಗಳಿವೆ. ಅವುಗಳಲ್ಲಿ ಪೂರ್ವಾಭಿಮುಖವಾಗಿರುವ ಮೂಲಾಂಜನೇಯ ಹಾಗೂ ಮಧ್ಯದಲ್ಲಿ ನರಸಿಂಹ ದೇವಾಲಯಗಳೂ ಇಲ್ಲಿವೆ. ೧೯೭೫ನೆಯ ಸೆಪ್ಟೆಂಬರದಲ್ಲಿ ನಾನು ಪುರಾತತ್ವ ವಿಭಾಗದ ಶ್ರೀ ಎಸ್. ಆರ್. ರಾವ್‌ರೊಡನೆ ಹಂಪೆಗೆ ಭೆಟ್ಟಿಯಿತ್ತ ಸಂದ ರ್ಭದಲ್ಲಿ ಇಲ್ಲಿ ದೊರೆತ ಶಾಸನದ ಪ್ರಕಾರ ಈ ದೇವಸ್ಥಾನದಲ್ಲಿದ್ದ ಮೂರ್ತಿ ಮೂಲಾಂಜನೇಯ ಎಂದು ತಿಳಿದುಬರುತ್ತದೆ. ಇದರ ಕಾಲ ಕ್ರಿ.ಶ. ೧೫೧೬. ಬಂಡೆಗಲ್ಲಿನಲ್ಲಿ ನರಸಿಂಹಮೂರ್ತಿಯನ್ನು ಕೊರೆಯಲಾಗಿದೆ. ಈ ಗುಡಿಯ ರಂಗಮಂಟಪ ಹಾಗೂ ಅದರ ಕೆತ್ತನೆ ಕೆಲಸ ಸುಂದರವಾಗಿವೆ. ಶುಕನಾಸಿಕ, ಅಂತರಾಳಿಕ, ರಂಗಮಂಟಪಗಳು ಚಿಕ್ಕವಾದರೂ ಚೊಕ್ಕ ರಚನೆಯಾಗಿವೆ. ಇದಕ್ಕೆ ಹೊರಗಿನಿಂದ ಪ್ರದಕ್ಷಿಣೆ ಮಾಡಲು ದ್ವಾರಗಳಿವೆ. ದೇವಿ ಗುಡಿಯೂ ಇದರ ಪಕ್ಕಕ್ಕೇ ನಿರ್ಮಿತವಾಗಿದೆ.

ಈ ಗುಡಿಯಿಂದ ಕೃಷ್ಣ ದೇವಾಲಯಕ್ಕೆ ದಾರಿ ಹರಿದಿದೆ. ಕೃಷ್ಣಾಪುರ ಮೊದಲುಗೊಳ್ಳುವುದು ಇಲ್ಲಿಂದಲೇ. ಕೃಷ್ಣದೇವ ರಾಯ ೧೫೧೩ರಲ್ಲಿ ಉದಯಗಿರಿಯನ್ನು ಗೆದ್ದು ಅಲ್ಲಿಂದ ಬಾಲಕೃಷ್ಣಮೂರ್ತಿಯನ್ನು ತಂದು ೧೫೧೯ರಲ್ಲಿ ಇಲ್ಲಿ ಪ್ರತಿಷ್ಠಾ ಪಿಸಿದನು. ಕೃಷ್ಣಗುಡಿ ನಿಜಕ್ಕೂ ಒಂದು ಸುಭದ್ರ ರಚನೆಯೇ

ಆಗಿದೆ. ಪೂರ್ವಮುಖವಾಗಿರುವ ಈ ಗುಡಿಗೆ ಉನ್ನತ ಗೋಪುರ ವಿದೆ. ಈ ಗೋಪುರದ ಮೇಲೆ ಪಶ್ಚಿಮಕ್ಕೆ ಕೃಷ್ಣದೇವರಾಯನ ಉದಯಗಿರಿ ವಿಜಯಯಾತ್ರೆಯ ಪ್ರತೀಕವಾಗಿ ರಚಿಸಿದ ಗಚ್ಚು ಗಾರೆಯ ಮೂರ್ತಿಚಿತ್ರಗಳಿವೆ. ಈ ಗುಡಿಯ ಪೌಳಿಯಲ್ಲಿ ಮಹಾ ರಂಗಮಂಟಪ ಎದುರಾಗುತ್ತದೆ. ಇದರ ಪೂರ್ವಕ್ಕೆ ಹಾಳು ಬಿದ್ದ ಗರುಡನ ಗುಡಿಯಲ್ಲದೇ ಅನೇಕ ಜಗಲಿಗಳೂ ಹಾಳು ಬಿದ್ದಿವೆ.

ಮಹಾರಂಗಮಂಟಪ ಬೃಹತ್ತಾಗಿಯೂ ಭವ್ಯವಾಗಿಯೂ ಇದ್ದರೂ ವಿಜಯವಿಠಲನ ಗುಡಿಯ ಸೌಂದರ್ಯ ಇದಕ್ಕಿಲ್ಲ. ಕಂಬಗಳ ಮೇಲೆ ವಿಜಯನಗರ ಶೈಲಿಯ ಅನೇಕ ಶಿಲ್ಪಚಿತ್ರಗಳಿವೆ. ಹೆಚ್ಚಾಗಿ ಅವೆಲ್ಲಾ ಬಾಲಕೃಷ್ಣನ ಲೀಲೆಯಾಗಿವೆ. ಪೂರ್ವ, ಉತ್ತರ, ದಕ್ಷಿಣದಿಂದ ಈ ಮಂಟಪವೇರುವ ಸೋಪಾನಗಳು ಇವೆ. ಮಂಟಪದ ಪಶ್ಚಿಮ ಬಾಗಿಲಿನಿಂದಲೂ ಪ್ರವೇಶವಾಗುತ್ತದೆ. ರಂಗಮಂಟಪದ ಮಧ್ಯೆ ನಾಲ್ಕು ಕಂಬಗಳಿವೆ. ನಾಲ್ಕು ಮೂಲೆಗೂ ನಿಂತಿರುವ ಈ ಕಂಬಗಳ ಸೌಂದರ್ಯ ಅಸದಳ ವಾದುದು. ಇವುಗಳ ಮಧ್ಯೆ ಇರುವುದೇ ನಾಟ್ಯರಂಗ. ಮುಂದೆ ಅಂತರಾಳಿಕ, ಶುಕನಾಸಿಕ, ಗರ್ಭಗೃಹಗಳಿವೆ. ಪ್ರದಕ್ಷಿಣಾಪಥ ಕತ್ತಲೆಯಿಂದ ತುಂಬಿದೆ. ಗರ್ಭಗೃಹದ ಹೊರಗೋಡೆಯ ಚಿತ್ರ ಗಳು ವರ್ಣನೆಗೆ ನಿಲುಕದ ಸೌಂದರ್ಯ ಪಡೆದಿವೆ. ಇವನ್ನು ಕಣ್ತಣಿಯುವಂತೆ ನೋಡಲು ಬೆಳಕಿನ ಸಹಾಯವಿಲ್ಲದೆ ಸಾಧ್ಯ ವಿಲ್ಲ.

ಗರ್ಭಗೃಹ ಎತ್ತರವಾಗಿದೆ. ಇಲ್ಲಿದ್ದ ಮೂರ್ತಿ ಮದ್ರಾಸ್ ವಸ್ತುಸಂಗ್ರಹಾಲಯದಲ್ಲಿದೆ. ಈ ಮೂರ್ತಿಯ ಕೈಗಳು ಒಡೆದು ಹೋಗಿವೆ. ಬಹುಶಃ ಇದನ್ನು ಬಾಲಕೃಷ್ಣನ ಇಕ್ಕೈಮೂರ್ತಿ ಎಂದು ಹೇಳಬಹುದು. ಆದರೆ ಪುರಂದರದಾಸರ ಕೃತಿಯೊಂದರಲ್ಲಿ 'ಶಂಖ ಚಕ್ರಧಾರಿ ಚತುರ್ಭುಜಮೂರ್ತಿ, ಎಂದು ವರ್ಣನೆಯಿದೆ.ಬಹುಶಃ ಶಂಖ ಚಕ್ರ ಹಿಡಿದ ಕೈಗಳು ಭಿನ್ನವಾಗಿರಬೇಕು. ಲಲಿತಾಸನಾರೂಢ ಮೂರ್ತಿಯ ಎರಡೂ ತೊಡೆಗಳ ಮೇಲೆ ಊರಿದ ಕೈಗಳ ಬೆರಳುಗಳು ಮಾತ್ರ ಇನ್ನೂ ಇವೆ. ವಿಠಲನ ಗುಡಿಯಂತೆ ಈ ಗುಡಿಯ ಮೇಲ್ಛಾವಣಿಯಲ್ಲಿ ಅಂತಹ ಕೆತ್ತನೆ ಕೆಲಸವಾಗಿಲ್ಲ.

ಮುಖ್ಯದೇವಾಲಯದ ಎಡಕ್ಕೆ ಬಹುಶಃ ದೇವಿಗುಡಿಯಿದೆ. ಹಂಪೆಯ ಎಲ್ಲ ಗುಡಿಗಳಿದ್ದಂತೆ ಇಲ್ಲಿಯೂ ಜೋಡು ಗರ್ಭಗೃಹಗಳಿವೆ. ಒಂದರಲ್ಲಿ ಮಾತ್ರ ಲಕ್ಷ್ಮೀವಿಗ್ರಹವಿದೆ. ಲಕ್ಷ್ಮೀದೇವಿಯ ಪ್ರತಿಷ್ಠಾಪನದಲ್ಲಿ ದಾನವಿತ್ತ ವಿಷಯ ಶಾಸನವೊಂದರಲ್ಲಿ ಬಂದಿದೆ.

ಕೃಷ್ಣಮಂದಿರದಲ್ಲಿ ಚಿಕ್ಕ ಚಿಕ್ಕ ಉಪಗೃಹಗಳಿವೆ. ಅಲ್ಲಿ ಈಗ ಯಾವುದೇ ಮೂರ್ತಿಗಳಿಲ್ಲ. ಹಾಗಾಗಿ ಈ ಬಗ್ಗೆ ಏನನ್ನೂ ಖಚಿತವಾಗಿ ಹೇಳುವುದು ಕಷ್ಟ. ಒಂದು ಗುಡಿಯ ವಿಮಾನದ ಮೇಲೆ ಗಚ್ಚಿನ ಷಣ್ಮುಖಮೂರ್ತಿ ಇದೆ. ಗೋಡೆಮೇಲೆ ಶಿಲಾಲೇಖ ಹೊಂದಿರುವ ಗುಡಿಯ ದ್ವಾರಪೀಠದ ಮೇಲೆ ಗಣಪತಿ ವಾಹನ ಮೂಷಕ ಚಿತ್ರವಿದೆ. ಗುಡಿಯ ಮೊದಲ ಪೌಳಿಯ

ದಕ್ಷಿಣಕ್ಕೆ ಮುಸಲ್ಮಾನ ಶೈಲಿಯಲ್ಲಿ ನಿರ್ಮಿಸಿದ ಕಟ್ಟಡವೊಂದು ಇದೆ. ಇಲ್ಲಿಯ ನಿವಾಸಿಗಳ ಮೇರೆಗೆ ಇದು ಉಗ್ರಾಣವಾಗಿದೆ. ಅಲ್ಲದೆ ಪಾಕಶಾಲೆಯೂ ಒರಳು ಕಲ್ಲುಗಳೂ ಅಲ್ಲಿವೆ. ಪಾಕ ಶಾಲೆಗೆ ಮಾಡಿರುವ ಹೊಗೆ ಕಿಂಡಿಯ ರಚನೆಯೂ ಇದೆ.

ಕೃಷ್ಣಗುಡಿಯ ಪೂರ್ವದ ಹೆಬ್ಬಾಗಿಲಿನಿಂದ ಹೊರಗೆ ಕಲ್ಲುದೋಣಿ ಇದೆ. ಈ ದೋಣಿಯ ಮೇಲೆ ವೈಷ್ಣವ ಚಿಹ್ನೆ ಗಳಾದ ಶಂಖ, ಚಕ್ರ, ಊರ್ಧ್ವಪುಂಡ್ರಗಳಿವೆ. ಕಲ್ಲುದೋಣಿ ಯಿಂದ ಹೊಲದಲ್ಲಿಳಿದು ಸಾಗಿದರೆ ನಾವು ಕೃಷ್ಣಾಪುರದ ತೇರು ಬೀದಿಗೆ ಸೇರುತ್ತೇವೆ. ಇಲ್ಲಿಯೇ ತುಸು ಮುಂದೆ ತೆಪ್ಪೋತ್ಸವ ಕೊಳವಿದೆ. ಇದರ ಮಧ್ಯೆ ವಿಮಾನವುಳ್ಳ ಚಿಕ್ಕ ಮಂಟಪ ವಿದೆ. ಈ ಪೇಟೆ ಹಾಗೂ ಗುಡಿಯ ಸುಂದರ ನೋಟವನ್ನು ಮಾತಂಗಪರ್ವತಾಗ್ರದಿಂದ ಪಡೆಯಬಹುದು. ವಿಜಯನಗರದ ಕಾಲಕ್ಕೆ ತೇರುಬೀದಿಯಿಂದ ಮಾತಂಗಪರ್ವತದ ಹಿಂದೆ ಅಚ್ಯುತಗುಡಿಗೆ ಹೋಗುವ ಮಾರ್ಗವಿದ್ದಿತು.

ಕೃಷ್ಣಗುಡಿಯ ಎದುರು ಮಾರ್ಗದಲ್ಲಿ ಕೆಳಗೆ ಇಳಿದರೆ ನೀರಾವರಿ ಕಾಲುವೆಯೊಂದಿದೆ. ಶಾಸನಗಳಲ್ಲಿ ಇದನ್ನು ಹಿರಿಯ ಕಾಲುವೆ ಎಂದು ಕರೆದಿದ್ದಾರೆ. ಈ ಕಾಲುವೆಗೆ ತುಸು ಹಿಂದೆ ಬಲಕ್ಕೆ ಹರಿದಿರುವ ದಾರಿಯಲ್ಲಿ ಕ್ರಮಿಸಿದರೆ ಮೊದಲು ಗರ್ಭಗೃಹವಷ್ಟೇ ಇರುವ ಶಿವಾಲಯ ಇದೆ. ಇಲ್ಲಿರುವ ದೊಡ್ಡ ಲಿಂಗಕ್ಕೆ ಈಗ ಬಡವಿಲಿಂಗ ಎಂದು ಕರೆಯುವ ಕಾರಣ ತಿಳಿ ಯದು. ಚಿಕ್ಕಕಾಲುವೆಯೊಂದು ಈ ಗುಡಿಯ ಪಕ್ಕದಲ್ಲಿ

ಹಾಯ್ದಿರುವುದರಿಂದ ಲಿಂಗ ಯಾವಾಗಲೂ ಜಲಾವೃತವಾಗಿರುತ್ತದೆ. ಇದರ ಬಲಕ್ಕೆ ಇರುವುದೇ ನರಸಿಂಹ ದೇವಾಲಯ. ಅಜಾನುಬಾಹು ನರಸಿಂಹಮೂರ್ತಿಯುಳ್ಳ ಈ ದೇವಾಲಯ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಾಣವಾಯಿತು ಎಂಬುದಕ್ಕೆ ಅಲ್ಲಿರುವ ಶಾಸನವೇ ಸಾಕ್ಷಿಯಾಗಿದೆ. ಈ ಮೂರ್ತಿಯನ್ನು ಉಗ್ರನರಸಿಂಹ ಎಂದು ಕರೆಯುವ ವಾಡಿಕೆ ಇದೆ. ಆದರೆ ಮೂರ್ತಿಯ ಹಿಂದೆ ಲಕ್ಷ್ಮೀದೇವಿಯ ಕೈ ಕಾಣುವುದರಿಂದ ಇದು ಲಕ್ಷ್ಮೀನರಸಿಂಹ ಮೂರ್ತಿಯೇ ಆಗಿದೆ. ಶಾಸನದಲ್ಲಿಯೂ ಸಹ ಲಕ್ಷ್ಮೀನರಸಿಂಹ ಎಂದೇ ಉಲ್ಲೇಖವಿದೆ. ಈ ಮೂರ್ತಿಯ ತಲೆಮೇಲೆ ಹೆಡೆ ತೆಗೆದಿರುವ ಸರ್ಪ ಕೊರೆದಿದ್ದಾರೆ. ಅಖಂಡ ಶಿಲೆಯ ಈ ಮೂರ್ತಿಯ ಎತ್ತರ ೬.೭ ಮೀಟರು ಎಂದು ದೇವ ಕುಂಜರಿಯವರು ಬರೆದಿದ್ದಾರೆ.

ಕಾಲುವೆಯ ದಂಡೆ ಮೇಲೆ ಸಾಗಿದರೆ ಗುಡಿಯೊಂದಿದೆ. ಈ ಕಟ್ಟಡ ಮತ್ತು ಕಂಬಗಳ ಮೇಲೆ ಇನ್ನೂ ಗಚ್ಚಿನ ಲೇಪವಿದೆ. "ಶ್ರೀ ಲಕ್ಷ್ಮೀವೆಂಕಟೇಶ ಪ್ರಸನ್ನ" ಎಂದು ಬಣ್ಣದಲ್ಲಿ ಬರೆಯಲಾಗಿದೆ. ಬಹುಶಃ ಇದು ಯಾರದೋ ವೈಷ್ಣವರ ನಿವಾಸ ಇದ್ದಿರಬೇಕು. ಈ ನಿವಾಸದ ಎದುರು ಬಂಡೆಗಲ್ಲೊಂದರ ಮೇಲೆ ಇಕ್ಕೈದೇವಿ ಪುಸ್ತಕಧಾರಿಯಾಗಿ ಕುಳಿತ ಚಿತ್ರವಿರುವ ಗುಡಿಗೆ ಸರಸ್ವತಿ ಗುಡಿ ಎಂದು ಕರೆಯುತ್ತಾರೆ. ಇದೇ ದಾರಿಯಲ್ಲಿ ಮುಂದುವರಿದರೆ ಮುರಿದುಬಿದ್ದಿರುವ ಶಿವಾಲಯ ಇದೆ. ಇಲ್ಲಿರುವ ನಂದಿಮೂರ್ತಿ ಬಂಡೆಗಲ್ಲಿನಲ್ಲಿ ಕೊರೆದ ಗಣೇಶ ಮೂರ್ತಿ ಸುಂದರವಾಗಿವೆ. ಮುಂದೆ ಸಾಗಿದರೆ ಮಾತಂಗ

ಪರ್ವತದ ಹಿಂದಿನ ಹೊಲದಲ್ಲಿಯೂ ಶಿವಾಲಯವಿದೆ. ಈ ದಾರಿಯಲ್ಲಿ "ಅಚ್ಯುತಾಪುರದ" ಎಂದಷ್ಟೇ ಇರುವ ಬಹುಶಃ ಶಾಸನ ರಚನೆಗೆ ಅಣಿಗೊಳಿಸಿ ನಿಲ್ಲಿಸಿರುವ ಶಿಲೆಯಿದೆ. ಇದರಿಂದ ಅಚ್ಯುತಾಪುರದ ಎಲ್ಲೆ ಇಲ್ಲಿಯವರೆಗೂ ಇತ್ತೆಂದು ಊಹಿಸಬಹುದು. ಹೀಗೆ ಮುಂದುವರಿಯುತ್ತ ಹಲವು ಮಂಟಪ ಹಾಗೂ ಆಲಯಗಳನ್ನು ವೀಕ್ಷಿಸಿ, ವಿಠಲ ಹಾಗೂ ತಾಲಾರಿ ಘಟ್ಟಗಳಿಗೆ ಹೋಗುವ ದಾರಿಗೆ ಬಂದು ಕೂಡಿಕೊಳ್ಳುತ್ತೇವೆ.

ಕೃಷ್ಣಾಪುರ ಹೆದ್ದಾರಿಯಲ್ಲಿ ಕೊನೆಗೆ ಎರಡು ಮಂದಿರಗಳಿವೆ. ಮೊದಲಿರುವುದು ವಿಷ್ಣುಗುಡಿ. ಇದಕ್ಕೆ 'ಚಂಡಿಕೇಶ್ವರ' ಎಂದು ತಪ್ಪು ಹೆಸರು ಕೊಟ್ಟಿದ್ದಾರೆ. ಇಲ್ಲಿರುವ ಶಾಸನದಂತೆ ಇದು ತಿರುಮಲೇಶನ ಗುಡಿ. ಈ ಗುಡಿಯ ದ್ವಾರಪಾಲಕರಿಂದಲೂ ಇತರ ವೈಷ್ಣವ ಚಿಹ್ನೆಗಳಿಂದಲೂ ಇದು ವೈಷ್ಣವ ದೇವಾಲಯವಲ್ಲದೆ ಬೇರೆಯಲ್ಲ. ಅಲ್ಲದೆ ಪೀಠದ ಮೇಲೆ ನಮ್ರಭಾವದಲ್ಲಿ ಕೈಜೋಡಿಸಿ ನಿಂತಿರುವ ಗರುಡನ ಚಿತ್ರದಿಂದಲೂ ಮತ್ತೂ ಸ್ಪಷ್ಟವಾಗುತ್ತದೆ. ಈ ಗುಡಿ ವಿಜಯನಗರ ಶೈಲಿಯಲ್ಲಿ ನಿರ್ಮಿತವಾಗಿದೆ. ತೆರೆದ ಮಂಟಪ, ನಮಸ್ಕಾರ ಭಂಗಿಯ ಯಾಳಿ, ಸಂಯುಕ್ತ ಕಂಬ ಇತ್ಯಾದಿ ಈ ಗುಡಿಯ ವೈಶಿಷ್ಟ್ಯ. ಇದು ವಿಜಯನಗರ ಕಾಲದ ಶಿಲ್ಪ ವೈಶಿಷ್ಟ್ಯವೂ ಹೌದು. ದೇವರ ಎಡಪಕ್ಕದಲ್ಲಿರುವ ಚಿಕ್ಕ ಗುಡಿ ದೇವಿಗುಡಿಯಿರಬೇಕು. ಬಲಪಕ್ಕದಲ್ಲಿ ಬಂಡೆಗಲ್ಲಿನಿಂದ ಕೊರೆದ ಮಹಿಷಾಸುರಮರ್ದಿನಿ ಇರುವಳು. ಈ ಗುಡಿಯ ಹತ್ತಿರವೇ ಛತ್ರವೂ ಇದ್ದಿತೆಂದು

ಶಾಸನಗಳು ತಿಳಿಸುತ್ತವೆ. ಪ್ರದಕ್ಷಿಣಾಪಥವಿರದ ಈ ಗುಡಿಗೆ ಸುತ್ತಲೂ ಕಂಬಗಳುಳ್ಳ ಪೌಳಿ ಇದೆ.

ಮುದುವೀರಣ್ಣನ ಗುಡಿಯ ದರ್ಶನಕ್ಕೆ ಈಗ ಬರೋಣ. ಮುದುವೀರಣ್ಣ ಕಾಲಕ್ರಮದಲ್ಲಿ ಮುದ್ದುವೀರಣ್ಣನಾಗಿ ಈಗ ಉದ್ದಾನ ವೀರಭದ್ರನಾಗಿ ನಿಂತಿದ್ದಾನೆ. ವೀರಭದ್ರ ಉದ್ದವಾಗಿ ಬೆಳೆಯುತ್ತ ಹೋದುದರಿಂದ ಅವನ ತಲೆಮೇಲೆ ಮೊಳೆ ಬಡಿದು ಬೆಳವಣಿಗೆ ನಿಲ್ಲಿಸಿದರೆಂದು ಕಥೆ ಹೇಳಿ 'ಉದ್ದಾನ ವೀರಭದ್ರ' ಹೆಸರನ್ನು ಜನ ಸಾಧಿಸುತ್ತಾರೆ. ಆದರೆ ಶಾಸನಗಳಲ್ಲಿ 'ಮುದುವೀರಂಣ' ಎಂಬ ಹೆಸರೇ ಉಲ್ಲೇಖಗೊಂಡಿದೆ. ಈ ಗುಡಿಯನ್ನು ಸದಾಶಿವರಾಯನ ಕಾಲದಲ್ಲಿ ಕಟ್ಟಲಾಯಿತು. ಚತುರ್ಭುಜ ವೀರಭದ್ರ ಖಡ್ಗ, ಗುರಾಣಿ, ಬಿಲ್ಲು, ಬಾಣಗಳನ್ನು ಹಿಡಿದಿದ್ದಾನೆ. ಮಾತಂಗ ಪರ್ವತದ ವೀರಭದ್ರನೂ ಹೀಗೆಯೇ ಆಯುಧಪಾಣಿಯಾಗಿದ್ದಾನೆ. ವೀರಭದ್ರನ ಪಕ್ಕಕ್ಕೆ ದಕ್ಷನ ಚಿಕ್ಕಮೂರ್ತಿ ಇದೆ.

ಬಹುಶಃ ವೀರಭದ್ರಗುಡಿಯ ಪಶ್ಚಿಮಕ್ಕೆ ಇರುವ ಮಂಟಪ ಛತ್ರ ಇರಬೇಕು. ವೀರಭದ್ರಗುಡಿಯಿಂದ ಕೃಷ್ಣಗುಡಿಯ ವರೆಗೆ ದವಸಧಾನ್ಯದ ಪೇಟೆ ಇದ್ದಿತು ಎಂದು ಶಾಸನಗಳು ತಿಳಿಸುತ್ತವೆ. ಕೃಷ್ಣಾಪುರದ ಉತ್ಪನ್ನ ನೂರುಸಾವಿರ ಪರದಾವೊಷ ಎಂದು ಆ ಕಾಲಕ್ಕೆ ಬಂದಿದ್ದ ಪೋರ್ತುಗೀಜ ವ್ಯಾಪಾರಿ ಪಾಯೆಸ್ ಹೇಳುತ್ತಾನೆ. ಕೃಷ್ಣಾಪುರದ ಈ ಆದಾಯವೆಲ್ಲ ಕೃಷ್ಣಗುಡಿಗೇ ಅರ್ಪಿತವಾಗುತ್ತಿತ್ತು ಎಂದು ಶಾಸನಗಳು ಸಾರುತ್ತವೆ. ಈ

ದಾರಿಯಲ್ಲಿ ಅಲ್ಲಲ್ಲಿ ದವಸದ ಪೇಟಿಯ ಅವಶೇಷಗಳು ಕಾಣಸಿಗುವುವು. ಅಲ್ಲದೆ ಮುದುವೀರಣ್ಣನ ಗುಡಿಯ ಹೊರಗೋಡೆಯಲ್ಲಿ ಕೆಲವು ಮಾಸತಿ ಕಲ್ಲುಗಳಿವೆ. ಅವುಗಳಲ್ಲಿ ಒಂದರಲ್ಲಿ ಮಾತ್ರ ಶಾಸನವಿದ್ದರೂ ಏನೂ ತಿಳಿದು ಬರುವುದಿಲ್ಲ.

ನೆಲಮಟ್ಟಕ್ಕಿಂತಲೂ ಕೆಳಗಿರುವ ಬಹುದೊಡ್ಡದಾದ ಗುಡಿಯನ್ನು ಪಾತಾಳಲಿಂಗೇಶ್ವರ ಗುಡಿಯೆಂದು ಕರೆಯುತ್ತಾರೆ. ಇದನ್ನೇ **Underground Temple** ಎಂದೂ ಕರೆಯುವರು. ಆದರೆ ಕ್ರಿ. ಶ. ೧೫೧೩ರ ಶಾಸನದ ಮೇರೆಗೆ ಇದು ವಿರೂಪಾಕ್ಷೇಶ್ವರ ಲಿಂಗ. ಇದು ಕೃಷ್ಣದೇವರಾಯನ ಕಾಲವಾದರೂ ಗುಡಿಯ ಶೈಲಿಯು ಇದರ ಕಾಲವನ್ನು ೧೫೧೩ ಕ್ಕಿಂತಲೂ ಹಿಂದೆ ಒಯ್ಯುತ್ತದೆ ಎಂಬುದು ಬಹುಮಟ್ಟಿನ ಅಭಿಪ್ರಾಯ. ನಾವು ನೋಡಿದ ಕ್ರಿ. ಶ. ೧೩೬೭ ರ ಶಾಸನದಲ್ಲಿ ಪ್ರಸಂನ ವಿರೂಪಾಕ್ಷದೇವರ ಹಾಗೂ ನಂದಿಪಾದದ ಸಾಕ್ಷಿಯಾಗಿ ದಾನ ಕೊಟ್ಟ ವಿವರ ಇದೆ. ಈ ಆಧಾರದಿಂದ ಮೊದಲನೆಯ ಬುಕ್ಕನ ಕಾಲಕ್ಕೇ ಪ್ರಸಂನ ವಿರೂಪಾಕ್ಷೇಶ್ವರ ದೇವಾಲಯವಿತ್ತು ಎಂದು ಖಚಿತವಾಗಿ ಸಾರಬಹುದು.

ಈ ಗುಡಿಯ ಪೂರ್ವಕ್ಕೆ ಮಹಾದ್ವಾರ ಇದೆ. ಒಳ ಪ್ರವೇಶವಾದರೆ ದೀಪಸ್ತಂಭ (ಕೆಲವರು ಧ್ವಜಸ್ತಂಭ ಎಂದೂ ಕರೆಯುವರು) ಹಾಗೂ ಗುಡಿಯ ಪೌಳಿ ಇದೆ. ವಿಜಯನಗರದ ನೀರಾವರಿ ಕಾಲುವೆಯೊಂದು ಈ ಗುಡಿಯ ಹಿಂದೆ ಹರಿದಿರುವುದರಿಂದ ಗುಡಿಯಲ್ಲಿ ಯಾವಾಗಲೂ ನೀರು ತುಂಬಿರುತ್ತದೆ.

ತುಂಬಿಕೊಂಡ ನೀರು ಹೊರಹೋಗುವ ವ್ಯವಸ್ಥೆಯನ್ನು ಹಿಂದೆ ಮಾಡಿದ್ದರೂ ಈಗ ಗುಡಿ ಹಾಳು ಬಿದ್ದಿರುವುದರಿಂದ ನೀರನ್ನು ಹೊರಹಾಕುವ ಕಿಂಡಿ ಮುಚ್ಚಿ ಹೋಗಿರಬೇಕು.

ಈಗಲೂ ಗುಡಿಯಲ್ಲಿ ಲಿಂಗ ಹಾಗೂ ನಂದಿ ಇವೆ. ಆದರೆ ಯಾವಾಗಲೂ ನೀರು ಇರುವುದರಿಂದ ಒಳಗೆ ಹೋಗುವುದು ಸಾಧ್ಯವಿಲ್ಲ. ಕಂಬಗಳು ದೊಡ್ಡವಾಗಿಯೂ ಚಚ್ಚೌಕವಾಗಿಯೂ ಇವೆ. ಮಹಾರಂಗಮಂಟಪ, ಅಂತರಾಳಿಕ, ಶುಕನಾಸಿಕ, ಕತ್ತಲೆಯಿಂದ ಆವೃತವಾದ ಗರ್ಭಗೃಹ ಇದೆ. ಪ್ರದಕ್ಷಿಣಾ ಪಥ ಇರುವುದರ ಬಗ್ಗೆ ತಿಳಿಯುವುದಿಲ್ಲ. ಇದರ ಪಕ್ಕಕ್ಕೆ ಬಹುವಾಗಿ ಹಾಳಾಗಿರುವ ಅಮ್ಮನವರ ಗುಡಿಯಿದೆ. ಮುಖ್ಯ ಗುಡಿಯ ಪಕ್ಕದಲ್ಲೂ ಒಂದು ಮಂಟಪವಿದೆ.

ಇಲ್ಲಿಂದ ಮುಂದುವರಿದರೆ ನಾವು ರಾಜವಾಡೆ ಅಥವಾ ಅಂತಃಪುರಕ್ಕೆ ತಲುಪುತ್ತೇವೆ. ರಾಜ್ಯಾಡಳಿತದ ಹಲವು ವಿಭಾಗಗಳೂ ಹಜಾರರಾಮನ ಗುಡಿಯೂ ಇಲ್ಲಿಯೇ ಇವೆ. ರಾಮಚಂದ್ರ ದೇವಸ್ಥಾನಕ್ಕೆ ಹಜಾರರಾಮನ ಗುಡಿ ಎಂದು ಕರೆಯಲು ಕಾರಣವಿದೆ. ಈ ಗುಡಿಯ ಗೋಡೆಮೇಲೆ ರಾಮಚಂದ್ರನ ಹಲವಾರು ಚಿತ್ರಗಳು ಇರುವುದರಿಂದ 'ಹಜಾರರಾಮ' ಎಂದೂ, ಈ ಗುಡಿಗೂ ಅರಮನೆಗೂ ಮಧ್ಯೆ ಒಂದು 'ಹಜಾರ' ಇದ್ದುದರಿಂದ ಹಜಾರರಾಮ ಎಂದೂ ಕಾರಣ ಕೊಟ್ಟು ಹೇಳುತ್ತಾರೆ. ಅದೇನಿದ್ದರೂ ಶಾಸನಗಳಲ್ಲಿ ಮಾತ್ರ 'ರಾಮಚಂದ್ರ ದೇವಸ್ಥಾನ' ಎಂದು ಇರುವುದರಿಂದ ನಾವೂ ಸಹ ಆ ಹೆಸರಿನಿಂದಲೇ ಕರೆಯುವುದು ಸೂಕ್ತವಾಗಿದೆ.

ಕೃಷ್ಣದೇವರಾಯ ಕ್ರಿ.ಶ. ೧೫೧೩ರಲ್ಲಿ ಈ ಗುಡಿ ಕಟ್ಟಿಸಿದನೆಂದು ಕೆಲ ದಶಕಗಳ ಹಿಂದೆ ಲಾಂಗಹರ್ಸ್ಟ ಹೇಳಿರುವನು. ಇಲ್ಲಿರುವ ಶಾಸನಗಳಲ್ಲಿ ಒಂದು ಮೊದಲನೆಯ ದೇವರಾಯನ ಕಾಲದ್ದು. ಅಂದರೆ ಕ್ರಿ.ಶ. ೧೪೧೬. ಇದರಲ್ಲಿ ದಾನವಿತ್ತ ಉಲ್ಲೇಖವಿದೆಯಾದ್ದರಿಂದ ಕ್ರಿ.ಶ. ೧೪೧೬ರ ಮೊದಲೇ ರಾಮಚಂದ್ರ ದೇವಸ್ಥಾನ ಇತ್ತೆಂದು ಸ್ಪಷ್ಟವಾಗುವದು.

ಗುಡಿಯ ಕಟ್ಟಡ ಶೈಲಿಯು ಶ್ರೀರಂಗಂ ಬಳಿ ಸಮಯವರಂದಲ್ಲಿರುವ ಈಗ ಭೋಜರಾಜ ಎಂದು ಕರೆಸಿಕೊಳ್ಳುತ್ತಿರುವ ಗುಡಿಯನ್ನು ಹೋಲುತ್ತದೆ. ರಂಗಮಂಟಪದ ಕರಿಯಕಲ್ಲಿನ ನಾಲ್ಕು ಕಂಬಗಳೂ ಅವುಗಳ ಮೇಲಿನ ಕೆತ್ತನೆ ಕೆಲಸವೂ ಹೊಯ್ಸಳ ಶಿಲ್ಪವನ್ನು ನೆನಪಿಗೆ ತರುತ್ತವೆ. ಹೊಯ್ಸಳ ಮುಮ್ಮಡಿ ಬಲ್ಲಾಳ ಕಟ್ಟಿಸಿದ ಹೊಸಪಟ್ಟಣ ಇಲ್ಲಿ ಇದ್ದಿರಬಹುದು. ಇದು ವಿರೂಪಾಕ್ಷ ತೀರ್ಥಕ್ಕೆ ಸಮೀಪ ಇದ್ದುದರಿಂದ 'ವಿರೂಪಾಕ್ಷ ಹೊಸಪಟ್ಟಣ' ಎಂದು ಕರೆದಿರಬಹುದು.

ರಾಮಚಂದ್ರ ದೇವಸ್ಥಾನದಲ್ಲಿ ಗರ್ಭಗೃಹ, ಶುಕನಾಸಿಕ, ಅಂತರಾಳಿಕ ಹಾಗೂ ರಂಗಮಂಟಪಗಳಿವೆ. ರಾಮಚಂದ್ರ, ಲಕ್ಷ್ಮಣ, ಸೀತೆಯರಿಗೆ ಮಾಡಿದ ಪೀಠವಿನ್ನೂ ಗರ್ಭಗೃಹದಲ್ಲಿದೆ. ಸುಂದರವಾದ ಮೇಲ್ಛಾವಣಿ ಗರ್ಭಗೃಹಕ್ಕೆ ಇದೆ. ಉತ್ತರ ದ್ವಾರದ ಗೋಡೆಯಲ್ಲಿರುವ ಶಾಸನವು ತಿರುವೇಂಗಳನಾಥ ಎಂಬುವನಿಂದ ರಾಮಚಂದ್ರ ಗುಡಿಯಲ್ಲಿ ಆಳ್ವಾರರ ಪ್ರತಿಷ್ಠೆಯಾಯಿತು ಎಂದು ಹೇಳುತ್ತದೆ. ಆದರೆ ಅದರಲ್ಲಿ ಕಾಲಸೂಚಕವಿಲ್ಲ.

ಅಂತರಾಳಿಕದ ಕಂಬಗಳ ಮೇಲೆ ದಶಾವತಾರ ಕೊರೆಯಲಾಗಿದೆ. ರಂಗಮಂಟಪದ ಚಚ್ಚೌಕಾರದ ಕರಿಯಕಲ್ಲಿನ ಕಂಬಗಳು ಮನ ಸೆಳೆಯುವ ರಚನೆಯಾಗಿವೆ. ಈ ಕಂಬಗಳು ಪ್ರತಿ ದಿಕ್ಕಿಗೂ ಮೂರು ಭಾಗವಾಗಿ ವಿಂಗಡಣೆಯಾಗಿದ್ದು, ಮೇಲಿನ ಎರಡು ಭಾಗಗಳಲ್ಲಿ ಹಲವೆಡೆ ವಿಷ್ಣುವಿನ ಉಪ ಅವತಾರವನ್ನೂ ಕೆಳಭಾಗ ದಲ್ಲಿ ಋಷಿ, ರಾಜ ಹಾಗೂ ಹನುಮಂತ ಮುಂತಾದವರ ಚಿತ್ರ ಗಳನ್ನೂ ಕೆತ್ತಲಾಗಿದೆ. ಎಲ್ಲ ಚಿತ್ರಗಳಿಗೆ ಸಿಂಹಲಲಾಟ ಹಾಗೂ ಎರಡು ಚಿತ್ರಗಳ ಮಧ್ಯೆ ನಾಗಬಂಧ ಇದೆ.

ಮುಖ್ಯ ಗುಡಿಯ ಉತ್ತರಕ್ಕೆ ಇರುವ ಅಮ್ಮನವರ ಗುಡಿ ಬಹುಶಃ ವಿಜಯನಗರ ಕಾಲದಲ್ಲಿಯೇ ರಚನೆಯಾಗಿರಬೇಕು. ಇಲ್ಲಿಯೂ ಜೋಡು ಗರ್ಭಗೃಹಗಳಿವೆ. ರಂಗಮಂಟಪದ ಪೂರ್ವ ಗೋಡೆಯ ಮೇಲೆ ಅರಸನೊಬ್ಬ ದಾನ ಕೊಡುವ ಚಿತ್ರವಿದೆ. ಪೌಳಿಯ ಪೂರ್ವ ಹಾಗೂ ಪಶ್ಚಿಮಕ್ಕೆ ಒಂದೊಂದು ಮಂಟಪ ಇದೆ. ಪೂರ್ವಕ್ಕಿರುವ ಮಂಟಪ ಕ್ರಿ.ಶ. ೧೫೨೧ರಲ್ಲಿ ದೇವರ ಉತ್ಸವಕ್ಕೆ ಕಟ್ಟಿದ್ದೆಂದು ಮುಖ್ಯ ಮಂದಿರದ ದಕ್ಷಿಣ ಗೋಡೆ ಯಲ್ಲಿರುವ ಶಾಸನ ತಿಳಿಸುವುದು. ಈ ಮಂಟಪದ ದಕ್ಷಿಣ ಗೋಡೆಯ ಶಾಸನದಿಂದ ಕೃಷ್ಣದೇವರಾಯ ರಾಮಚಂದ್ರದೇವ ರಿಗೆ ಕ್ರಿ.ಶ. ೧೫೧೩ರಲ್ಲಿ ದಾನ ಕೊಟ್ಟ ವಿವರ ತಿಳಿಯುವುದು. ಕ್ರಿ.ಶ. ೧೫೨೧ರ ವೇಳೆಗೆ ಶಿಲೆಯಲ್ಲಿ ರಾಮಾಯಣ ಮೂಡಿಸುವ ಕಾರ್ಯ ಪೂರ್ಣವಾಗಿತ್ತು. ಬಹುಶಃ ಈ ಉತ್ಸವ ಮಂಟಪ ಮೇಲೆದ್ದಾಗ ಹಲವು ಚಿತ್ರಗಳು ಗೋಡೆಯಲ್ಲಿ ಮರೆಯಾಗಿವೆ. ಈ ಗುಡಿಯ ಹೊರಗೋಡೆಯಲ್ಲಿ ಬಾಲಕಾಂಡದಿಂದ ಪಟ್ಟಾ

ಭಿಷೇಕದ ವರೆಗೆ ರಾಮಾಯಣದ ದೃಶ್ಯಗಳನ್ನು ಮೂಡಿಸಿದ್ದಾರೆ. ಗುಡಿಯ ಒಳಗೆ ಕಂಬಗಳ ಪುಷ್ಪಬೋದಿಗೆಗಳು ಶೈಲಿಯಲ್ಲಿ ಪರಿಪೂರ್ಣತೆ ಪಡೆದಿವೆ. ಇವಕ್ಕೆ ಜೋತುಬಿದ್ದ ಪುಷ್ಪಮೊಗ್ಗಗಳು ಒಡೆದು ಹೋಗಿವೆ. ಗುಡಿಯ ಒಳಕಂಬ, ಹೊರಕಂಬ ಹಾಗೂ ಉತ್ಸವ ಮಂಟಪದ ಒಳಕಂಬಗಳ ಶೈಲಿಯಲ್ಲಿ ಬಹು ವ್ಯತ್ಯಾಸ ಕಂಡುಬರುವುದು. ವಿಮಾನವುಳ್ಳ ಈ ಗುಡಿಯ ಮಾಳಿಗೆಯಲ್ಲಿ ಪೂರ್ವಕ್ಕೆ ಇರುವ ಗಚ್ಚುಗಾರೆಯ ಹಲವು ಮೂರ್ತಿಗಳು ಹಾಗೂ ಅಮ್ಮನವರ ಗುಡಿಯ ವಿಮಾನ ಇನ್ನೂ ಸುಸ್ಥಿತಿಯಲ್ಲಿವೆ. ಪೌಳಿಯ ಕಲ್ಲುಗೋಡೆಯಲ್ಲಿ ಕೋಲಾಟ, ವಸಂತೋತ್ಸವ, ವ್ಯಾಪಾರಿಗಳು, ಆನೆ ಸವಾರರು, ಒಂಟೆ, ಕುದುರೆ ಮೊದಲಾದವನ್ನು ಕೊರೆದಿದ್ದಾರೆ. ಅಲ್ಲದೆ ಈ ಗುಡಿಯ ದಕ್ಷಿಣಕ್ಕೆ ಪಾಕಶಾಲೆಯೂ ಇದೆ.

ಈ ಗುಡಿಯ ಎದುರು ಬೀದಿಯಲ್ಲಿ ಕ್ರಮಿಸಿದರೆ ಹಾಳುಬಿದ್ದ ಹಲವು ಶಿವಾಲಯ, ವೈಷ್ಣವಾಲಯ, ಛತ್ರ ಇವೆ. ಇದೇ ಮಾರ್ಗದಲ್ಲಿ ಮುಂದೆ ಅಂತಸ್ತುಳ್ಳ ದ್ವಾರವಿದೆ. ಬಹುಶಃ ಇದು ಮಹಾನವಮಿ ದಿಬ್ಬಕ್ಕೆ ಹೋಗುತ್ತಿದ್ದ ದಾರಿ ಇರಬೇಕು. ಹಾಗೆಯೇ ಹೊಲದಲ್ಲಿ ಇಳಿದರೆ ಪಟ್ಟಣದ ಎಲ್ಲಮ್ಮಗುಡಿ ಹಾಗೂ ರಂಗನಗುಡಿಗೆ ಮಾರ್ಗವಿದೆ. ಈ ಭಾಗಕ್ಕೆ ರಾಮಪುರ ಎಂದು ವಿ.ರಂಗಾಚಾರ್ ಕರೆದಿದ್ದಾರೆ. ಆದರೆ ಅವರು ಯಾವ ಆಧಾರದ ಮೇಲೆ ಹಾಗೆ ಕರೆದರು ಎಂದು ನಮಗೆ ತಿಳಿಯದು. ನಮ್ಮ ಅಭಿಪ್ರಾಯದಲ್ಲಿ ಬಹುಶಃ ಈ ಭಾಗ ವಿದ್ಯಾನಗರ ಆಗಿರಬೇಕು. ಇದು ವಿಜಯನಗರದ ಒಂದು ಅಂಗವೇ ಆಗಿತ್ತು.

ಲಾಂಗ್‌ಹರ್ಸ್ಟ್, ಸಿವೆಲ್ ಮೊದಲಾದ ಯುರೋಪಿಯನ್ ವಿದ್ವಾಂಸರು ಇಲ್ಲಿರುವ ಕೆಲವು ದಿಬ್ಬಗಳಿಗೆ ಒಂದೊಂದು ಹೆಸರು ಕೊಟ್ಟಿದ್ದಾರೆ. ಅಂದರೆ ಮಹಾನವಮಿ ದಿಬ್ಬಕ್ಕೆ ತಮಗೆ ತಿಳಿದಂತೆ ಹೆಸರು ಇಟ್ಟಿದ್ದಾರೆ. ಈಗ ಪುರಾತತ್ವ ಇಲಾಖೆಯುವರು ಇಲ್ಲಿ ಉತ್ಖನನ ಪ್ರಾರಂಭಿಸಿದ್ದಾರೆ. ಈ ಇಲಾಖೆಯ ಅಧಿಕಾರಿ ಶ್ರೀ ಎಸ್. ಆರ್. ರಾವ್ ಹಾಗೂ ಅವರ ಸಹಾಯಕರು ಉತ್ಖನನ ಮಾಡುವಾಗ ನೆಲಮಾಳಿಗೆ (**underground chamber**) ಯಲ್ಲಿ ಕ್ರಿ.ಪೂ. ಒಂದನೆಯ ಶತಮಾನದ ಬ್ರಾಹ್ಮೀಲಿಪಿಯ ಶಾಸನವನ್ನು ಹೊರತೆಗೆದರು. ಅದೀಗ ಕಮಲಾಪುರದ ಪುರಾತತ್ವ ಶಾಖೆಯಲ್ಲಿದೆ. ಅಂದರೆ ಕೊಪ್ಪಳದ ಗವಿಮಠದಲ್ಲಿದ್ದ ಬೌದ್ಧರು ಇಲ್ಲಿಯವರೆಗೂ ಬಂದಿದ್ದಿರಬಹುದು. ಮಹಾನವಮಿ ದಿಬ್ಬದ ಹೊರಗೋಡೆ ಹತ್ತಿರ ಇರುವ ಕಂಬಗಳು ಬಲಿಗಂಬಗಳಿರಬೇಕು.

ಕಮಲಮಹಲ್ ಭಾಗವನ್ನು ಅಂತಃಪುರ ಎಂದು ಕರೆಯಲು ಕಾರಣ ಇಲ್ಲದಿಲ್ಲ. ಇದು ಚಂದ್ರಗಿರಿ ಆನೆಗೊಂದಿಯಲ್ಲಿರುವ ರಾಣಿವಾಸವನ್ನು ಹೋಲುತ್ತಿರುವುದರಿಂದ ಅಂತಪುರವೆಂದೇ ಜನರಿಗೆ ಭಾಸವಾಗಿರಬೇಕು. ಪಶ್ಚಿಮದ್ವಾರದ ಮೂಲಕ ಒಳಪ್ರವೇಶವಾದರೆ ಎಡಕ್ಕೆ ಇರುವ ಉದ್ದವಾದ ಮೊಗಸಾಲೆಯ ಗಚ್ಚುಗಾರೆ ಕಂಬಗಳು ಆಕಾರದಲ್ಲಿ ದೊಡ್ಡವೂ ದಪ್ಪವೂ ಆಗಿವೆ. ಇವುಗಳಲ್ಲಿ ಯಾವುದೇ ಚಿತ್ರವಿಶೇಷಗಳಿಲ್ಲ. ಇದನ್ನು ಕುಮಾರರಾಮನ ಗರಡಿ ಎಂದು ಜನ ಕರೆಯುವುದುಂಟು. ಇದರ ಎದುರು ವೇದಿಕೆಯೊಂದಿದೆ. ವೇದಿಕೆಗೆ

ಸುತ್ತಲೂ ಇರುವ ಆನೆ, ಕುದುರೆ, ಹಂಸಗಳ ಸಾಲು ಸೌಂದರ್ಯವರ್ಧಕವಾಗಿವೆ. ಇದು ಯಾವ ಕಾರ್ಯೋಪಯೋಗಕ್ಕೆ ಸಾಧನವಾಗಿತ್ತು ಎಂದು ತಿಳಿಯುವುದು ಕಷ್ಟ. ಪೌಳಿಯ ಬಲಕ್ಕೆ ಕೊಳವೊಂದಿದೆ. ಒಂದು ವೇಳೆ ಕಮಲ ಮಹಲ್ ಅಂತ ಪುರವೇ ಆಗಿದ್ದರೆ ಮಾತ್ರ ಇದು ರಾಣಿಯರ ಈಜುಕೊಳವೇ ಆಗಿತ್ತು ಎಂದು ತಿಳಿಯುವುದು ಸುಲಭ.

ಕಮಲದ ಆಕಾರದಲ್ಲಿರುವ ಈ ಮಂದಿರವನ್ನು ಇತ್ತೀಚಿನ ಸಂಶೋಧಕರು ಕಮಲಮಹಲ್ ಎಂದು ಹೆಸರಿಸಿದ್ದಾರೆ. ಇದು ಭೂಮಿಯ ಸಮತಲದಿಂದ ಸ್ವಲ್ಪ ಕೆಳಗಿದೆ. ಮೂರು ಪಾವಟಿಗೆಗಳಿಂದ ಮೇಲೇರಿದರೆ ಕೆಳಮನೆಗೆ ತಲುಪುತ್ತೇವೆ. ಪಕ್ಕದ ಸೋಪಾನಗಳು ನಮ್ಮನ್ನು ಮೇಲ್ಮನೆಗೂ ಕೊಂಡೊಯ್ಯುತ್ತವೆ. ಗಚ್ಚುಗಾರೆಯಿಂದಾದ ಈ ಮನೆಯ ಅಟ್ಟದ ಮೇಲೆ ಮಧ್ಯೆ ಗುಮ್ಮಟಾಕಾರವಾಗಿದ್ದು, ಅಲ್ಲಿ ಮೂರ್ತಿಗಳನ್ನಿಡುವ ಮಾಡುಗಳೂ ಪೀಠಗಳೂ ಇವೆ. ಬಹುಶಃ ಆ ಕಾಲದಲ್ಲಿ ಇಲ್ಲಿ ಅನೇಕ ಮೂರ್ತಿಗಳು ಇದ್ದಿರಬೇಕು. ಹಸಿರು ಬಂಡೆಗಲ್ಲಿನ ಹಿನ್ನೆಲೆಯಲ್ಲಿ ರಚಿತವಾದ ಕೆಂಪು ಮಣ್ಣಿನ ಈ ಕಟ್ಟಡ ಮನಸೆಳೆಯುತ್ತದೆ. ಪಾಯೆಸ್ ಹೇಳಿದ 'ಒಂದರ ಮೇಲೊಂದಿದ್ದ ಕೊಠಡಿಮನೆ' ಇದೇ ಇರಬೇಕು ಎಂಬ ವಿಚಾರ ದಿಟ್ಟನೋಟಕ್ಕೆ ಹೊಳೆಯುತ್ತದೆ. ಅವನು ವರ್ಣಿಸಿದ ಮುತ್ತು ರತ್ನ ಮುಂತಾದ ಶೃಂಗಾರ ವೈಭವಗಳು ಈಗ ಇಲ್ಲವಾದರೂ ಕಮಾನು, ಗುಮ್ಮಟಗಳು ಇಲ್ಲಿಯೇ ಇವೆ. ಅಂದರೆ ಪಾಯೆಸನ ವರ್ಣನೆಯನ್ನು ಈ ರಚನೆ ಬಹುವಾಗಿ ಹೋಲುತ್ತದೆ.

ಬಹುಶಃ ಸ್ತ್ರೀಯರಿಗೆ ಕಲಾಶಿಕ್ಷಣ ಇಲ್ಲಿಯೇ ದೊರೆಯುತ್ತಿದ್ದಿರಬೇಕು.

ಕಮಲಮಹಲ್‌ನಿಂದ ಪೂರ್ವಕ್ಕೆ ಮತ್ತೊಂದು ಗೋಡೆ ಇದೆ. ಅದರ ಎದುರಿಗೆ ಇರುವುದು ಗಜಶಾಲೆ. ಪರ್ಶಿಯಾ ರಾಯಭಾರಿ ಅಬ್ದುರ್‌ರಜಾಕನು ಗಜಶಾಲೆ ಅರಮನೆಗೆ ಸಮೀಪದಲ್ಲಿತ್ತೆಂದು ಹೇಳಿದ್ದಾನೆ. ಅವನ ವರ್ಣನೆ ಈ ಗಜಶಾಲೆಯನ್ನೇ ಹೋಲುತ್ತದೆ.

ಈ ಶಾಲೆಯಲ್ಲಿ ಒಂದರ ಪಕ್ಕಕ್ಕೆ ಒಂದರಂತೆ ಒಟ್ಟು ಹನ್ನೊಂದು ಕೊಠಡಿಗಳಿವೆ. ಮಧ್ಯದ ಕೊಠಡಿಯಲ್ಲಿ ಮಾತ್ರ ಸೋಪಾನಗಳಿದ್ದು, ಈ ಮೂಲಕ ಮಾಳಿಗೆ ಸೇರಬಹುದು. ಪ್ರತಿಯೊಂದು ಕೊಠಡಿಗೂ ಕಮಾನುಳ್ಳ ಮುಖ್ಯದ್ವಾರ ದೊಡ್ಡದಾಗಿರುವುದರಿಂದ ನೋಟಕ್ಕೆ ಭವ್ಯವಾಗಿವೆ. ಒಂದು ಕೊಠಡಿಯಿಂದ ಮತ್ತೊಂದು ಕೊಠಡಿಯ ಪ್ರವೇಶಕ್ಕೆ ಎರಡು ಗೋಡೆಗಳ ಮಧ್ಯೆ ಚಿಕ್ಕದ್ವಾರಗಳಿವೆ. ಮೇಲ್ಭಾವಣಿಯಲ್ಲಿ ಕಟ್ಟಿಗೆ ಗೂಟಗಳಿವೆ. ಮೇಲ್ಮಾಳಿಗೆಯಲ್ಲಿ ನಿಂತಾಗ ಅದರ ಸ್ವರೂಪ ಕಂಡು ಬರುವುದು. ಎರಡೂ ತುದಿಗಳಲ್ಲಿ ದುಂಡಗೂ, ಎರಡು ಹಾಗೂ ನಾಲ್ಕನೆಯವು ಗುಡಿಯ ಶಿಖರದಂತೆಯೂ, ಮೂರನೆಯವು ಕುಂಬಳಕಾಯಿಯಂತೆ ಏಣುಳ್ಳ ಹೊದಿಕೆ ಹೊಂದಿಯೂ ಮತ್ತು ಕೊನೆಯ ಎರಡು ದುಂಡಗೂ ಇವೆ. ಅರಸನ ಉಪಯೋಗಕ್ಕೆ ಹನ್ನೊಂದು ಆನೆಗಳು ಇದ್ದುವೆಂದು ವಿಜಯನಗರ ಕಾಲಕ್ಕೆ ಬಂದಿದ್ದ ವೀಕ್ಷಕನೊಬ್ಬ ಹೇಳಿದ್ದಾನೆ.

ಗಜಶಾಲೆಯ ಪಕ್ಕದ ಕಟ್ಟಡವನ್ನು ಕೆಲವರು ಸಂಗೀತ ಶಾಲೆ ಎಂದೂ ಮತ್ತೆ ಕೆಲವರು ಕಾವಲಿಗರ ಮನೆ ಎಂದೂ ಕರೆಯುವರು. ಎತ್ತರದ ಕಟ್ಟೆಯ ಮೇಲೆ ಕಂಬಗಳ ಸಾಲಿದೆ. ಮಧ್ಯಭಾಗ ಆಕಾಶಮುಖವಾಗಿ ತೆರೆದಿದೆ. ಪಾಯೆಸ್ ಮಂತ್ರಾಲೋಚನ ಮಂದಿರದ ವರ್ಣನೆಯನ್ನು ಮಾಡಿದ್ದಾನೆ. ಬಹುಶಃ ಆ ಕಟ್ಟಡ ಇದೇ ಆಗಿರಬೇಕು.

ಗಜಶಾಲೆಯ ಹಿಂದೆ ಹೊಲದಲ್ಲಿ ಸಾಗಿದರೆ ಇರುವ ಅನೇಕ ಗುಡಿಗಳಲ್ಲಿ ವಿಷ್ಣುಗುಡಿ ತುಂಬಾ ಸುಂದರವಾದುದು. ಮುಂದುವರಿದರೆ ಮೂರ್ತಿಗಳಿಲ್ಲದ ಎರಡು ಜೈನ ದೇವಾಲಯಗಳು ಇವೆ. ಶಾಸನವಿರುವ ಒಂದನ್ನು, ಇಮ್ಮಡಿ ದೇವರಾಯನೇ ಕ್ರಿ. ಶ. ೧೪೨೬ರಲ್ಲಿ ಕ್ರಮುಕಪರ್ಣವೀಧಿ ಅಥವಾ ಪರ್ಣಪೂಗೀಫಲಾಪರ್ಣ ವೀಧಿಯಲ್ಲಿ ಪಾರ್ಶ್ವಜಿನೇಶ್ವರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿಸಿದನು. ಈ ಜಿನಾಲಯದ ಗೋಡೆಗಳು ಜಡವಾದ ಉದ್ದ ಕಲ್ಲುಗಳಿಂದ ರಚನೆಯಾಗಿದೆ. ಗರ್ಭಗೃಹ ಪಶ್ಚಿಮ ಮುಖವಾಗಿದೆ. ಜಿನಾಲಯ ದೊಡ್ಡದಿದ್ದರೂ ಅದರ ಜಡಭರತ ಕಂಬಗಳು ಮಾತ್ರ ಆಕರ್ಷಕ ಅಂಶವಾಗಿದೆ.

ಮತ್ತೆ ಹೊಲದಲ್ಲಿ ಕ್ರಮಿಸಿದರೆ ಇರುವ ಅನೇಕ ಗುಡಿಗಳ ಬಗ್ಗೆ ಹೇಳುವುದು ಸಾಧ್ಯವಾಗುತ್ತಿಲ್ಲ. ಹಾಗೆ ಮುಂದುವರಿದರೆ ದ್ವಾರವೊಂದಿದೆ. ಇದಕ್ಕೆ ಉಪಯೋಗವಾಗಿರುವ ಕಲ್ಲುಗಳ ಆಕಾರ ಬೆರಗುಗೊಳಿಸುವಂತಹದು. ಈ ದ್ವಾರದಿಂದ ಮುಂದೆ ಗಾಣಗಿತ್ತಿ ಗುಡಿಗೂ, ವಿಠಲ ಗುಡಿಗೂ, ಗೋರಿ ಕೆಳಗಿನ ಗ್ರಾಮಕ್ಕೂ ಕೂಡಬಹುದು.

ಪುನ ಗಜಶಾಳೆಯ ಸಮೀಪ ಬರೋಣ. ಇಲ್ಲಿ ರಂಗನಗುಡಿ ಇದೆ. ಆದರೆ ಇರುವ ಮೂರ್ತಿ ರಂಗನಲ್ಲ, ಅಜಾನುಬಾಹು ಹನುಮಂತ. ಇಲ್ಲಿಯ ಶಾಸನದಂತೆ ಇಲ್ಲಿದ್ದುದು ಮಾಧವ ಮೂರ್ತಿ. ಇಲ್ಲಿ ಆ ಕಾಲವಲ್ಲಿ ದೊಡ್ಡ ಅಂಗಡಿಯ ಪಕ್ಕಕ್ಕೆ 'ಮೈಲಸಂತ'ದಲ್ಲಿ ಮಾಧವನ ರಂಗಭೋಗಕ್ಕೆ ೨೫ ಅಂಕಣದ ಮಂಟಪ ಇದ್ದಿತು. ಮೈಲಸಂತ ಎಂದರೆ 'ನವಿಲಿನ ಪೇಟೆ'ಎಂದೂ ಅಥವಾ ಮಾಂಸದ ಮಾರುಕಟ್ಟೆ ಎಂದೂ ಆಗಬಹುದು. ಕ್ರಿ. ಶ. ೧೫೪೫ ರಲ್ಲಿ ಕಟ್ಟಲ್ಪಟ್ಟ ರಂಗಮಂಟಪ ವಿಜಯನಗರದ ಪತನದೊಂದಿಗೇ ಮುರಿದು ಬಿದ್ದಿದೆ. ಅಲ್ಲಲ್ಲಿ ಉಳಿದಿರುವ ಕಂಬಗಳ ಮೇಲ್ಭಾವಣಿ ವಿಜಯವಿಠಲನ ಗುಡಿಯ ಮೇಲ್ಭಾವಣಿಯನ್ನು ಹೋಲುತ್ತದೆ.

ಇಲ್ಲಿಂದ ಚಂದ್ರಶೇಖರ ಗುಡಿಯ ದಾರಿಯಲ್ಲಿ ಮತ್ತೊಂದು ವಿಷ್ಣುಗುಡಿ ಇದೆ. ಇದಕ್ಕೆ ಸರಸ್ವತಿ ಗುಡಿ ಎಂದು ಕರೆಯುವ ಕಾರಣ ತಿಳಿಯದು. ಇಲ್ಲಿರುವ ಶಾಸನದಿಂದ ಚತುರ್ಥಗೋತ್ರದ ತಿಪ್ಪಮ್ಮ ಬೂಮಕ್ಕಂಗಾರು ಕೃಷ್ಣಾಪುರ ಅಗ್ರಹಾರದ ಕೆಲ ಭೂಮಿಯನ್ನು ಕೊಂಡು ತನ್ನ ಹಿರಿಯರಿಗೆ ಪುಣ್ಯವಾಗಲಿ ಎಂದು ತಿರುವೇಂಗಳನಾಥನಿಗೆ ದಾನ ಕೊಟ್ಟ ವಿಷಯ ತಿಳಿಯುವುದು. ಇದರ ಸಮೀಪದಲ್ಲಿ ಅಷ್ಟಕೋನಾಕೃತಿಯ ಕೊಳವೊಂದಿದೆ. ಮಧ್ಯೆ ಕಾರಂಜಿ ಕಟ್ಟೆ ಇದೆ. ಇಲ್ಲಿಂದ ಮುಂದಿರುವುದೇ ಚಂದ್ರಶೇಖರ ಗುಡಿ.

ಎಪಿಗ್ರಾಫಿಯಾ ಕರ್ನಾಟಕದ ಶಾಸನವೊಂದು ಉಲ್ಲೇಖಿಸುವ ಹಂಪೆ ಮಲ್ಲಿಕಾರ್ಜುನಸ್ವಾಮಿಯೇ ಬಹುಶಃ ಈ ಚಂದ್ರ

ಶೇಖರ ಇರಬಹುದು. ಇದರ ಹೊರತಾಗಿ ಬೇರೆ ಆಧಾರಗಳು ದೊರೆಯುತ್ತಿಲ್ಲ. ಈ ಗುಡಿಯ ಪೌಳಿಯಲ್ಲಿ ಪೂರ್ವಮುಖವಾಗಿರುವ ಸ್ವಾಮಿಯ ಹಾಗೂ ಅಮ್ಮನವರ ಗುಡಿ ಇವೆ. ದೇವರ ಗುಡಿಯ ಗೋಪುರ ದುಂಡಗಿದೆ. ಕಂಬಗಳ ಮೇಲೆ ಸುಂದರವಾದ ಅನೇಕ ಚಿತ್ರಗಳಿವೆ. ಹೊರಗೋಡೆಯ ಮೇಲಿರುವ 'ಕುಂಬ ಪಂಜರ'ದ ಚಿತ್ರಗಳೂ ಸುಂದರವಾಗಿವೆ. ಗರ್ಭಗೃಹ, ಶುಕನಾಸಿಕ, ಅಂತರಾಳಿಕ ಹಾಗೂ ಚಿಕ್ಕ ಮಂಟಪಗಳೆಲ್ಲ ವಿಜಯನಗರ ಶೈಲಿಯಲ್ಲಿವೆ. ಅಮ್ಮನವರ ಗುಡಿಗೆ ಜೋಡು ಗರ್ಭಗೃಹವೂ ಶಾಲಾ ಶಿಖರವೂ ಇದೆ.

ಪುನಃ ಹೆದ್ದಾರಿಯಲ್ಲಿ ಹಂಪೆ ಮಾರ್ಗವಾಗಿ ಸಾಗಿದರೆ ರಾಣಿಯರ ಸ್ನಾನಗೃಹ ಇದೆ. ಇದು ಮುಸ್ಲಿಂ ಶೈಲಿಯಲ್ಲಿದೆ. ಕನಕಾಚಲದಲ್ಲಿಯ ರಾಣಿಯರ ಸ್ನಾನಗೃಹವನ್ನು ಇದು ಹೋಲುತ್ತಿರುವುದರಿಂದ ಆ ಹೆಸರಿನಿಂದ ಕರೆದಿರುವುದರ ಹೊರತು ಬೇರೆ ದಾಖಲೆಗಳಿಲ್ಲ. ಗಚ್ಚುಗಾರೆಯ ರಚನೆಯಾದ ಇದಕ್ಕೆ ಉಪ್ಪರಿಗೆಯೂ ಇದೆ. ಕಟ್ಟಡದ ನೋಟ ಮನೋಹರವಾಗಿದೆ.

ಕಾಮಲಾಪುರದಿಂದ ಹಂಪೆಗೆ ಗಮಿಸುವ ಮಾರ್ಗಮಧ್ಯೆ ಎಡಭಾಗದಲ್ಲಿ ಇರುವ ಹೊಲವೊಂದರಲ್ಲಿ ಕಾಲುವೆಯ ಇಕ್ಕೆಲಗಳ ಮೇಲೆ ಕಲ್ಲಿನಿಂದ ಕೊರೆದ ತಟ್ಟೆ ಬಟ್ಟಲುಗಳಿವೆ. ಈ ಕಾಲುವೆ ಸುಮಾರು ೭.೭ ಮೀಟರು ಉದ್ದವಿದೆ ಎಂದು ದೇವಕುಂಜರಿ ಹೇಳುತ್ತಾರೆ. ಇದನ್ನು ಪುರಾತತ್ವ ವಿಭಾಗದವರು 'ಭೋಜನಶಾಲೆ' ಎಂದು ಕರೆದಿದ್ದಾರೆ. ಆದರೆ ಕ್ರಿ.ಶ. ೧೫೪೫ರ

ಶಾಸನವೊಂದು "ಮಾದಲಾಪುರದ ಗ್ರಾಮದ ಕೆಱೆವೊಳಗೆ ಊಟದ ಕಾಲುವೆ ಸ್ತಳದಲ್ಲು...." ಎಂದು ಕರೆದಿರುವುದರಿಂದ ಈ ಕಾಲುವೆಗೆ ಊಟದ ಕಾಲುವೆ ಎಂಬುದೇ ಒಪ್ಪುವ ಹೆಸರು.

ಕದಿರಾಮ ಅಥವಾ ಕಡ್ಡಿರಾಮಪುರದಲ್ಲಿ ಹಲವು ಗೋರಿ, ಮಸೀದೆಗಳಿವೆ. ಈ ಪುರದ ಹೊಲವೊಂದರಲ್ಲಿ ಅಚ್ಯುತರಾಯನ ಕಾಲದ ಶಿವಾಲಯವಿದೆ. ಈ ಗುಡಿಯ ಕಂಬಗಳ ಮೇಲೆ ಮಾತ್ರ ವೈಷ್ಣವ ಸಂತರನ್ನು ಬಿಡಿಸಲಾಗಿದೆ. ಈ ಗುಡಿಯಿಂದ ಮುಂದೆ ಕೋಟೆಗೋಡೆ ಹಾಗೂ ದ್ವಾರಗಳಿವೆ. ಸೈನ್ಯ ಹಾಗೂ ರಕ್ಷಣ ಶಾಖೆಯ ಕಟ್ಟಡಶೈಲಿಗೆ ಇದೊಂದು ಉತ್ತಮ ಉದಾಹರಣೆ. ಅಲ್ಲದೇ ಆಂಜನೇಯಸ್ವಾಮಿ ಗುಡಿಯೂ ಇನ್ನೂ ಬೆಳಕಿಗೆ ಬಾರದ ಶಾಸನವೊಂದೂ ಇಲ್ಲಿದೆ.

ವಿರೂಪಾಕ್ಷ ಗುಡಿಯ ಎದುರು ಇರುವ ದೊಡ್ಡ ನಂದಿಯ ದರ್ಶನ ಪಡೆದು, ಸ್ವಲ್ಪ ಹಿಂದೆ ಕ್ರಮಿಸಿ ಎಡಕ್ಕೆ ನದೀತೀರದ ದಾರಿಯಲ್ಲಿ ಇರುವ ಮಂಟಪಗಳ ಕೆಳದಾರಿಯಲ್ಲಿ ಸಾಗಿದರೆ ಕೋದಂಡರಾಮನ ಗುಡಿ ಇದೆ. ಅದರ ಎದುರಿಗೆ ಇರುವುದೇ ಪುರಾಣ ಪ್ರಸಿದ್ಧವಾದ ಚಕ್ರತೀರ್ಥ. ಇದರ ಪಕ್ಕದಲ್ಲಿ ಸೀತಾ ಕುಂಡವೂ ಇದೆ. ಇಲ್ಲಿಯೇ ಮಾಧ್ವಗುರು ನರಸಿಂಹತೀರ್ಥರಿದ್ದ ರೆಂದು ಹೇಳುವರು. ವಿಠಲಗುಡಿಯ ಹಿಂದೆ ನದೀತೀರದಲ್ಲಿ ಪೂರ್ವಮುಖವಾಗಿ ಕ್ರಮಿಸಿದರೆ ನಡುಗಡ್ಡೆ ಕಾಣುವುದು. ಅಲ್ಲಿರುವ ವೃಂದಾವನಕ್ಕೆ ನರಹರಿತೀರ್ಥರ ವೃಂದಾವನ ಎಂದು ಕರೆಯುತ್ತಾರೆ.

ಕೋದಂಡರಾಮ ಗುಡಿ ತುಂಬ ಹಳೆಯದು. ಅಖಂಡ ಶಿಲೆಯಲ್ಲಿ ರಾಮ, ಸೀತೆ ಹಾಗೂ ಲಕ್ಷ್ಮಣರ ರಚನೆಯಾಗಿದೆ. ಗರ್ಭಗೃಹ ನದಿಯ ಕಡೆಗೆ ಉತ್ತರಮುಖವಾಗಿದೆ. ಮುಂದಿರುವ ಮಂಟಪ ಅನಂತರದ ಜೋಡಣೆಯಾಗಿದೆ. ಮಂಟಪದ ಕಂಬದ ಮೇಲೆ ನಂದಿನಾಗರಿಲಿಪಿಯಲ್ಲಿ ಹಲವು ಶಾಸನಗಳಿವೆ. ಈ ಗುಡಿಯ ಹಿಂದೆ ಇರುವುದೇ ಯಂತ್ರೋದ್ಧಾರಕ ಹನುಮಂತ. ಇದನ್ನು ವ್ಯಾಸರಾಯರು ಕೃಷ್ಣದೇವರಾಯನ ಕುಹೂಯೋಗ ಪರಿಹರಿಸಿದ ಮೇಲೆ ಸ್ಥಾಪಿಸಿದರು ಎಂದು ಹೇಳುವರು. ಮಾಧ್ವರ ಗುಡಿ, ಹನುಮಂತನನ್ನು ಯಂತ್ರದಲ್ಲಿ ಕೂಡ್ರಿಸಲಾಗಿದೆ. ಇಲ್ಲಿಯೇ ಅನಂತಶಯನನ ಸುಂದರ ಮಂದಿರವಿದೆ. ಇದರ ಸಮೀಪದಲ್ಲಿ ಮಂಟಪವೊಂದಿದೆ. ಈ ಮಂಟಪದ ಕಂಬಗಳ ಮೇಲೆ ಗೋಪಾಲಕೃಷ್ಣದಾಸ, ಶ್ರೀನಿವಾಸ ಮುಂತಾದ ಹೆಸರುಗಳಿವೆ. ಇವರೆಲ್ಲ ವಿಠಲೇಶ್ವರನ ಭಕ್ತರು. ಶ್ರೀನಿವಾಸ ಎಂಬುದು ಪುರಂದರ ದಾಸರ ಪೂರ್ವದ ಹೆಸರಾದುದರಿಂದ ಬಹುಶಃ ಇದೇ ಪುರಂದರ ಮಂಟಪ ಆಗಿರಬೇಕೆಂದು ನನಗನಿಸುವುದು. ಈಗ ಕರೆಯುವ ಪುರಂದರಮಂಟಪ ಆಗಿನ ಕಾಲದಲ್ಲಿ ನದಿ ದಾಟುವವರಿಗೆ ನಿರೀಕ್ಷಣಾಲಯದಂತೆ ಇರಬೇಕು. ಮಳೆಗಾಲದಲ್ಲಿ ಈ ಮಂಟಪ ನೀರಿನಿಂದ ಮುಚ್ಚಿಹೋಗಿರುತ್ತದೆ.

ಈ ಮೇಲಿನ ದಾಸಕೂಟದ ಪಕ್ಕದಲ್ಲಿ ಮೇಲೆ ವಿಷ್ಣುವೂ ಕೆಳಗೆ ಲಿಂಗವೂ ಹಾಗೂ ಯಜ್ಞಕುಂಡವಿರುವ ಮಂಟಪವಿದೆ. ಇದನ್ನು ವ್ಯಾಸರಾಯರ ಮನೆಯೆಂದು ಕರೆಯುತ್ತಾರೆ. ಆದರೆ

ಈ ಮಂಟಪದಲ್ಲಿರುವ ಶಾಸನದಂತೆ ಇದು ವ್ಯಾಸರಾಯರ ಮನೆಯಾಗಿರದೆ ಬೇರೊಬ್ಬರ ಮನೆಯಾಗಿದೆ. ಈಗ ಹೇಳಿದ ಮಂಟಪಗಳಿಗೆ ಕೋದಂಡರಾಮ ಮಂದಿರದ ಎದುರು ನದೀ ತೀರದಿಂದಲೇ ಹೋಗಬೇಕು. ಇಲ್ಲಿಯೇ ಸಹಸ್ರಲಿಂಗಗಳ ದರ್ಶನ ನಮಗೆ ಆಗುವುದು.

ಇಲ್ಲಿಂದ ಮುಂದೆ ಬಲಕ್ಕೆ ಇರುವುದೇ ಚಕ್ರತೀರ್ಥನಿವಾಸಿ ವಿಷ್ಣುವಿನ ಗುಡಿ. ಪೂರ್ವಮುಖವಾಗಿರುವ ಈ ಗುಡಿಯ ಮಹಾ ಮಂಟಪದಲ್ಲಿ ಗರುಡಮೂರ್ತಿ ಇದೆ. ಕಂಬಗಳ ಮೇಲೆ ಕೈಜೋಡಿಸಿ ನಿಂತಿರುವ ದಾನಿಗಳ ಚಿತ್ರವಿದೆ. ಗರ್ಭಗೃಹದಲ್ಲಿ ಶಂಖ, ಚಕ್ರ, ಗದಾಪಾಣಿಯಾದ ವಿಷ್ಣು ಲಕ್ಷ್ಮೀ ಮತ್ತು ಭೂದೇವಿಯೊಡನೆ ನಿಂತಿದ್ದಾನೆ. ಆದರೆ ಮೂರ್ತಿ ಸ್ವಲ್ಪ ಭಿನ್ನಗೊಂಡಿದೆ. ಗರ್ಭಗೃಹದ ಬಾಗಿಲು ಮೇಲೆ ಇರುವ ಶಾಸನವೊಂದರಲ್ಲಿ ಸದಾಶಿವರಾಯನ ಆಳ್ವಿಕೆಯಲ್ಲಿ ಕೋದಂಡ ಋಷಿಗೋತ್ರದ ತಿರುಮಲಶೆಟ್ಟಿಯ ಸೇವೆಯ ವರ್ಣನೆಯಿದ್ದು, ಸುಂದರ ಅಷ್ಟಕಗಳಲ್ಲಿ ವಿಷ್ಣುಸ್ತೋತ್ರವೂ ಇದೆ. ಪ್ರದಕ್ಷಿಣಾ ಪಥ ಇಲ್ಲ. ಸದಾಶಿವರಾಯನ ಕಾಲಕ್ಕಿಂತ ಮೊದಲೇ ಈ ಗುಡಿ ರಚಿತವಾಗಿರಬೇಕು.

ವಿಷ್ಣುಗುಡಿಯಿಂದ ಮುಂದುವರಿದರೆ ಅಚ್ಯುತಾಪೇಟೆಗೆ ಸೇರುವೆವು. ಇದಕ್ಕೆ 'ಸೂಳೆ ಬಜಾರ' ಎಂದು ಕರೆಯುದೂ ಉಂಟು. ಮಹಾದ್ವಾರದಲ್ಲಿ ಇರುವ ಶಾಸನ ಅಚ್ಯುತಾಪೇಟೆ ಯೆಂದೇ ಕರೆದಿದೆ. ಅಲ್ಲದೇ ಪೇಟೆ ಸಾಲಿನ ಕಂಬವೊಂದರ

ಶಾಸನವೂ ಇದೇ ಹೆಸರಿನಿಂದ ಕರೆಯುತ್ತದೆ. ಆದುದರಿಂದ ಇದು 'ಸೂಳೆ ಬಜಾರ' ಅಲ್ಲ, 'ಅಚ್ಯುತಾಪೇಟೆ'ಯಾಗಿ ಕರೆಯು ಬೇಕಾಗಿದೆಯೆಂದು ಡಾ. ಜಿ. ಎಸ್. ದೀಕ್ಷಿತರು ತಮ್ಮ ಲೇಖನ ವೊಂದರಲ್ಲಿ ಹೇಳಿದ್ದಾರೆ. ಆದರೆ ಈ ನಿಜವಾದ ಹೆಸರಿನಿಂದ ಯಾರೂ ಕರೆಯುತ್ತಿಲ್ಲ. ದೇವಕುಂಜರಿಯುವರೂ ತಮ್ಮ ಹೊತ್ತಿಗೆಯಲ್ಲಿ ಸೂಳೆ ಬಜಾರ ಎಂದೇ ಇದನ್ನು ತಪ್ಪಾಗಿ ಗ್ರಹಿಸುತ್ತಾರೆ. ಅಚ್ಯುತರಾಯನ ಆಳ್ವಿಕೆಯಲ್ಲಿ ಹಿರಿಯ ತಿರುಮಲರಾಜನು ಗರ್ಭಗೃಹದಲ್ಲಿ 'ತಿರುವೇಂಗಳನಾಥ'ನನ್ನು ಸ್ಥಾಪಿಸಿ, ಹೊರಮಲೆಯ ಚೋರಮನೂರು ಎಂಬ ಈ ಊರಿನ ಹೆಸರಿಗೆ ಬದಲು 'ಅಚ್ಯುತಾಪುರ' ಎಂದು ಹೆಸರಿಟ್ಟು, ಈ ಪೇಟೆಗೆ 'ಅಚ್ಯುತಾಪೇಟೆ' ಎಂದು ಕರೆದರು. ಇದರ ಕಾಲ ಕ್ರಿ. ಶ. ೧೫೩೪.

ಈ ಗುಡಿಗೆ ಎರಡು ಸುತ್ತುಗಳಿವೆ. ಮೊದಲ ಸುತ್ತಿನಲ್ಲಿ ಉತ್ತರಕ್ಕೆ ಗೋಪುರ ಮಹಾದ್ವಾರವೂ ಪಶ್ಚಿಮ ಹಾಗೂ ದಕ್ಷಿಣಕ್ಕೆ ಚಿಕ್ಕ ದ್ವಾರಗಳಿವೆ. ಒಳಪ್ರವೇಶವಾದಾಗ ಬಲಕ್ಕೆ ವಿಜಯವಿಠಲ ಗುಡಿಯ ನೂರುಕಾಲು ಮಂಟಪವನ್ನು ಹೋಲುವ ಮಂಟಪವೊಂದಿದೆ. ಕಂಬಗಳಲ್ಲಿ ಕೃಷ್ಣನ ಬಾಲ ಲೀಲೆಯೇ ಮೊದಲಾದ ಚಿತ್ರಗಳಿವೆಯಾದರೂ ವಿಠಲ ಗುಡಿಯ ಕಲೆಯಂತೆ ನಯವಾಗಿಲ್ಲ. ಉತ್ತರದ ಎರಡನೆಯ ದ್ವಾರದ ಮೂಲಕ ಪ್ರವೇಶವಾದಾಗ ಮುಖ್ಯದೇವಾಲಯ ಕಾಣುವುದು. ಇಲ್ಲಿ ಪೂರ್ವ, ಪಶ್ಚಿಮ ಹಾಗೂ ಉತ್ತರಕ್ಕೆ ಗೋಪುರಗಳಿವೆ. ದ್ವಾರದ ಕಂಬಗಳಲ್ಲಿ ಮಕರಾರೂಢ ಗಂಗೆಯಿರುವಳು. ಮಹಾ

ಮಂಟಪ, ರಂಗಮಂಟಪ, ಅಂತರಾಳಿಕ, ಶುಕನಾಸಿಕ, ಗರ್ಭ ಗೃಹ ಹಾಗೂ ಪ್ರದಕ್ಷಿಣಾಪಥ ವಿಜಯನಗರ ಶೈಲಿಯಲ್ಲಿವೆ. ಗರ್ಭಗೃಹ ಉತ್ತರಮುಖವಾಗಿದೆ. ಮಹಾಮಂಟಪದ ದಕ್ಷಿಣ ದ್ವಾರದಲ್ಲಿ ನಿಂತಿರುವ ದ್ವಾರಪಾಲಕರು ಭಿನ್ನವಾಗಿದ್ದರೂ ಅವರ ಭಯಂಕರತೆ ಇನ್ನೂ ಅಳಿದಿಲ್ಲ. ತುರುಕರು ಇಟ್ಟ ಬೆಂಕಿಯ ದಾಳಿಗೆ ಮಹಾಮಂಟಪದ ಮೇಲ್ಛಾವಣಿ ಹಾರಿ ಹೋಗಿದೆ. ರಂಗಮಂಟಪ ಸುಂದರವಾಗಿದೆ. ಇದರ ನಾಲ್ಕು ಕಡೆಯ ಕಂಬಗಳಲ್ಲಿ ಇರುವ ಕಲೆ ಕಂಗೊಳಿಸುತ್ತದೆ. ಗುಡಿಯ ಗರ್ಭಗೃಹದಲ್ಲಿ ಈಗ ಮೂರ್ತಿ ಇಲ್ಲ. ಆದರೆ ಈ ಹಿಂದೆ ಅಚ್ಯುತಾಪೇಟೆಯ ಬಲಬದಿಯಲ್ಲಿ– ನಾವು ನೋಡಿದ ಶಾಸನದ ಪಕ್ಕದಲ್ಲಿ ವೆಂಕಟೇಶ್ವರ ಮೂರ್ತಿ ಒಂದಿದೆ. ಇದು ಗರ್ಭ ಗೃಹಕ್ಕೆ ಸೇರಿದುದೋ ಇಲ್ಲವೋ ತಿಳಿಯದು. ಮುಖ್ಯಗುಡಿಯ ಬಲಪಕ್ಕಕ್ಕೆ ಇರುವ ದೇವಿಗುಡಿಯಲ್ಲಿ ಗರ್ಭಗೃಹ, ಶುಕನಾಸಿಕ, ಅಂತರಾಳಿಕ, ರಂಗಮಂಟಪ ಇದೆಯಲ್ಲದೇ ಪಶ್ಚಿಮಕ್ಕೆ ಮತ್ತೊಂದು ಗರ್ಭಗೃಹ ಜೋಡಿಸಲ್ಪಟ್ಟಿದೆ. ಇಲ್ಲಿಯೂ ಯಾವುದೇ ಮೂರ್ತಿ ಇಲ್ಲವಾಗಿದೆ.

ವೆಂಕಟೇಶ್ವರ ಗುಡಿಯ ಎದುರು ಗರುಡನ ಚಿಕ್ಕ ಆಲಯ ವಿದೆ. ಇಲ್ಲಿಯ ದ್ವಾರಪಾಲಕರ ವೇಷ ವಿಶಿಷ್ಟವಾದುದು. ಹಣೆಮೇಲೆ ಮೂರು ನಾಮಗಳೂ, ಅಡಿಯಿಂದ ಮುಡಿಯವರೆಗೂ ಹೊದ್ದ ಕುಂಚಿಗೆಯೂ, ಕೋಲನ್ನು ಆನಿಸಿ, ಅದರ ಮೇಲೆ ಗದ್ದ ಊರಿ ನಿಂತಿದ್ದಾರೆ. ಇವರನ್ನು ಕುರುಬರೆಂದೂ ಗೌಡರೆಂದೂ ವಿಧವಿಧವಾಗಿ ಕರೆಯುತ್ತಾರೆ. ಇವರ ಪಕ್ಕದಲ್ಲಿ ಅಂಜಲಿಬದ್ಧ

ದಾನಿಗಳ ಅಥವಾ ಭಕ್ತರ ಚಿತ್ರಗಳಿವೆ. ಗುಡಿಯ ಹೊರಗೋಡೆ ಮೇಲೆ ವಿಶೇಷ ಕಲೆ ಇಲ್ಲವಾದರೂ ಕುಂಭಪಂಜರ ಸುಂದರ ವಾಗಿದೆ.

ಅಚ್ಯುತಾಪೇಟೆಯಿಂದ ಹೊರಬರುವಾಗ ಎಡಕ್ಕೊಂದು ಕೊಳವಿದೆ. ವಿಠಲ ಗುಡಿಯ ದಾರಿಯಲ್ಲಿ ನಮಗೆ ಹಲವು ವೈಷ್ಣವಾಲಯಗಳ ದರ್ಶನವಾಗುತ್ತದೆ. ಇವೆಲ್ಲ ವಿಜಯನಗರ ಕಾಲದ ಕಟ್ಟಡಗಳಾದರೂ ಯಾವುದೇ ವಿವರ ತಿಳಿದು ಬರುವುದಿಲ್ಲ.

ಈ ಮಾರ್ಗವಾಗಿ ಮುಂದೆ ಕ್ರಮಿಸಿದರೆ ನದೀತಟದಲ್ಲಿ ಅಖಂಡ ಶಿಲೆಯಲ್ಲಿ ನಿರ್ಮಿಸಿದ ಗುಡಿ ಇದೆ. ಮೊದಲು ಇದಕ್ಕೆ ಜೈನಗುಡಿ ಎಂದೂ ಅನಂತರ ಗುಡಿಯ ಗೋಡೆಯ ಮೇಲಿದ್ದ ಹನುಮಂತ ಹಾಗೂ ಗರುಡ ಮೂರ್ತಿಗಳಿಂದ ರಾಮನ ಗುಡಿ ಎಂದೂ ಕರೆದರು. ಆದರೆ ಇಲ್ಲಿಯ ಶಾಸನದ ಮೇರೆಗೆ ಇದು ನರಸಿಂಹ ದೇವಾಲಯವಾಗಿದೆ. ಕ್ರಿ. ಶ. ೧೩೭೯ ಕ್ಕಿಂತ ಮೊದಲೇ ಈ ಗುಡಿ ಇದ್ದಿತೆಂದು ಶಾಸನ ತಿಳಿಸುತ್ತದೆ. ಇದೇ ಕಾಲದಲ್ಲಿ ಕಟ್ಟಿದ ಶಿವಾಲಯವೂ ಈ ಗುಡಿಯ ಪಕ್ಕದಲ್ಲಿದೆ.

ನರಸಿಂಹ ದೇವಾಲಯದ ಕಟ್ಟಡ ಶೈಲಿ ಉಳಿದ ಗುಡಿಗಳಿಗಿಂತ ಭಿನ್ನವಾದುದು. ಗರ್ಭಗೃಹ ಪೂರ್ವಕ್ಕೂ ಪ್ರವೇಶದ್ವಾರ ಉತ್ತರ ದಕ್ಷಿಣಕ್ಕೂ ಇವೆ. ಪ್ರದಕ್ಷಿಣಾಪಥವಿಲ್ಲ. ಈ ಗುಡಿಯ ಕೆಳಗೆ ಬೇರೊಂದು ಕಟ್ಟಡವಿದ್ದಿತೆಂದು ಭಾಸವಾಗುವುದು. ರಂಗ

ಮಂಟಪದ ಸುತ್ತ ಚಿಕ್ಕ ಕಟ್ಟೆ ಇದೆ. ಗುಡಿಯ ಹಿಂದೆ ಕಲ್ಲುಪ್ಪರಿಗೆಯ ಮಂಟಪವಿದೆ. ಉತ್ತರಕ್ಕೂ ಅಂತಹದೇ ದ್ವಾರವಿದೆ. ಇಲ್ಲಿಂದ ಎದುರಿಗೆ ನದಿ, ಬಲಕ್ಕೆ ವಿಠಲಾಪುರ, ಎಡಕ್ಕೆ ವಿರೂಪಾಕ್ಷ ತೀರ್ಥ, ಹೇಮಕೂಟದ ವರೆಗೂ ಕಣ್ಣು ಹರಿಯುತ್ತದೆ. ಸೃಷ್ಟಿಸೌಂದರ್ಯವನ್ನು ಮನಸಾರೆ ತಣಿಯುವ ಸೊಬಗಿನ ತಾಣ ಇದಾಗಿದೆ.

ಅಲ್ಲದೆ ಈ ಗುಡಿಯ ಎದುರು ನೆಲದ ಮೇಲೆ ಇರುವ ಶಾಸನದ ಕೆಳಗೆ ತುಸು ದೂರದಲ್ಲಿ ನಾಗಬಂಧದ ಮಧ್ಯೆ ನಾಲ್ಕು ಜೊತೆ ಪಾದಚಿಹ್ನೆಗಳಿದ್ದು, ರಾಮರಾಜ ತಿರುಮಲೆರಾಜ ಎಂದು ಬರೆದಿದೆ.

ವಿಠಲಾಪುರದ ಮಾರ್ಗದಲ್ಲಿ ಹಲವು ಗುಡಿಗಳಿವೆ. ಅಲ್ಲಲ್ಲಿ ಹಾಳುಬಿದ್ದಿರುವ ಮನೆಗೋಡೆಗಳ ಪರಿಶೀಲನೆಯಿಂದ ವಿಠಲಾ ಪುರದಲ್ಲಿ ಶ್ರೀಮಂತ ಶ್ರೀ ವೈಷ್ಣವರು ವಾಸವಾಗಿದ್ದರೆಂದು ತಿಳಿಯುವುದು. ಇಲ್ಲಿಯೇ ಮಹಾದ್ವಾರವೂ ಹಾಳುಬಿದ್ದಿರುವ ವಿಷ್ಣುಗುಡಿಯೂ ಇದೆ. ವಿಠಲಾಪುರಕ್ಕೆ ಮೊದಲು ಕಲ್ಲುಪ್ಪರಿಗೆ ದ್ವಾರವಿದೆ. ಅದಕ್ಕೆ ಮೊದಲು ಮತ್ತೊಂದು ವೈಷ್ಣವ ಗುಡಿಯೂ ಇದೆ. ಇದರ ಮುಂದೆ ಛತ್ರದಂತಿರುವ ಮನೆ ಯೊಂದು ಇದೆ. ನೆಲದ ಮೇಲೆ ದಾಸಾನುದಾಸರ ಚಿತ್ರವೂ ಅದರ ಪಕ್ಕದಲ್ಲಿ 'ಶ್ರೀ ವಿಠಲೇಶ್ವರನೇ ಗತಿ' ಎಂದು ಆರಂಭ ವಾಗುವ ಶಾಸನವೂ ಇದೆ.

ಕಲ್ಲುಪ್ಪರಿಗೆ ಮಂಟಪದಿಂದ ವಿಠಲಾಪುರದ ಮುಖವಾದರೆ ಮೊದಲಿಗೆ ಇರುವುದು ತುಲಾಪುರುಷದಾನ (King's

balance). ಬಯಲಿನಲ್ಲಿ ಅರಸರು ತಲಾಪುರುಷದಾನ ಮಾಡುತ್ತಿದ್ದರೆನ್ನಲು ಅನುಮಾನವೇ. ಯಾಕೆಂದರೆ ಇದನ್ನು ದೇವರ ಸಮ್ಮುಖದಲ್ಲಿ ಮಾಡಬೇಕೆಂದು ಪ್ರಾಚೀನ ಗ್ರಂಥಗಳು ಹೇಳುತ್ತವೆ. ಎತ್ತರವಾದ ಎರಡು ಕಲ್ಲುಕಂಬಗಳ ಮೇಲೆ ಕಲ್ಲುತೊಲೆಯನ್ನಿರಿಸಿದ್ದಾರೆ. ತೊಲೆಯ ಕೆಳಭಾಗಕ್ಕೆ ರಂಧ್ರವುಳ್ಳ ಮೂರು ಹಿಡಿಕೆಗಳಿವೆ. ಕಂಬಗಳಲ್ಲಿ ಒಳ್ಳೆಯ ಕಲೆಯ ಕೆಲಸ ವಾಗಿದೆ. ಕಂಬದ ಬಲಕ್ಕೆ ಕೆಳಗೆ ಇದನ್ನು ಮಾಡಿಸಿದ ವ್ಯಕ್ತಿ ಹಾಗೂ ಅವನ ಪತ್ನಿಯರಿಬ್ಬರ ಚಿತ್ರಗಳಿವೆ. ಅವು ಕೃಷ್ಣ ದೇವರಾಯ ಹಾಗೂ ಅವನ ಪತ್ನಿಯರ ಚಿತ್ರಗಳೆಂದು ಎಲ್ಲರ ತಿಳಿವಳಿಕೆ. ಅವರ ಹೋಲಿಕೆ ಹಿಡಿದು ಹೀಗೆ ಕರೆಯಬಹು ದಾದರೂ ಅರಸ ಅರಸಿಯರ ಚಿತ್ರಗಳೆಲ್ಲ ಹೀಗೆಯೇ ಇವೆಯಾದ್ದ ರಿಂದ ಹಾಗೆ ಕರೆಯುವುದು ಆಧಾರವಿಲ್ಲದ ಹೇಳಿಕೆಯಾಗುತ್ತದೆ ತುಲಾಪುರುಷದ ಹತ್ತಿರ ಹಾಸುಗಲ್ಲುಗಳಲ್ಲಿ ದಾಸಾನುದಾಸರ ಚಿತ್ರಗಳನ್ನೂ ಕೊರೆಯಲಾಗಿದೆಯಲ್ಲದೇ ಮನೆತನವೊಂದರ ಹೆಸರನ್ನೂ ಉಲ್ಲೇಖಿಸಲಾಗಿದೆ. ಚಿತ್ರದುರ್ಗದ ಸಂಪಿಗೆ ಸಿದ್ಧೇಶ್ವರ ಗುಡಿಯ ಆವರಣದಲ್ಲಿರುವ ಉಯ್ಯಾಲೆ ಕಂಬವೂ ಈ ತುಲಾಪುರುಷದಂತೆಯೇ ಇದೆಯಾದ್ದರಿಂದ ಇದು ದೇವರ ತೊಟ್ಟಿಲೋತ್ಸವ ಇಲ್ಲವೇ ಉಯ್ಯಾಲೆಗಾಗಿ ನಿರ್ಮಾಣವಾಗಿರ ಬೇಕು. ಆದರೂ ಇದು ಯಾವುದರ ಸಂಕೇತವೋ ನಿರ್ದೇಶನವೋ ನಿಶ್ಚಿತವಾಗಿ ಹೊಳೆಯುವುದಿಲ್ಲ.

ಇಲ್ಲಿಂದ ಮುಂದೆ ವಿಠಲಗುಡಿಯ ದಾರಿಯ ಬಲಭಾಗಕ್ಕೆ ಸ್ವಲ್ಪ ಹಿಂದೆ ಹಾಳುಬಿದ್ದ ಗುಡಿಯಿದೆ. ಬಹುಶಃ ಇದು ಗುಡಿ

ಯಾಗಿರದೆ ಒಂದು ಮಠವಾಗಿರಬೇಕು. ಯಾಕೆಂದರೆ ಇದರ ಮಧ್ಯದಲ್ಲಿ ಗರ್ಭಗೃಹ ಇದ್ದು ಪ್ರದಕ್ಷಿಣಾಪಥವುಳ್ಳ ಮನೆಯಂತೆ ಇದೆ. ಗರ್ಭಗೃಹದ ಮೇಲ್ಛಾವಣಿ ಬಿದ್ದುಹೋಗಿದೆ. ಪುನಃ ಮೊದಲಿನ ದಾರಿಯಲ್ಲಿ ಸಾಗಿದರೆ ಎಡಕ್ಕೆ ಒಂದು ಮಹಾದ್ವಾರ ಇದೆ. ಈ ದ್ವಾರಕ್ಕೆ ರಾಮಗೋಪುರ ಎಂದು ಕರೆಯುವರು. ಇದರ ಕಂಬಗಳಲ್ಲಿ ಮಕರಾರೂಢ ಗಂಗೆ ಇರುವಳು. ಈ ದ್ವಾರದ ಸಮೀಪ ಪೊದೆಯಲ್ಲಿ ನಾಗಾಲೋಟ ಭಂಗಿಯಲ್ಲಿ ಕೊರೆದ ಅಶ್ವವುಳ್ಳ ಸುಂದರ ಕಂಬವಿದೆ.

ಈ ಮುಂದೆ ಹಾಳುಬಿದ್ದಿರುವ ಮಂದಿರದಲ್ಲಿ ಹಲವು ಕಂಬ ಗಳುಳ್ಳ ಅಂಕಣವಿದೆ. ಬಹುಶಃ ಇದು ಛತ್ರವಿರಬೇಕು. ಅದು ಎರಡು ಭಾಗವುಳ್ಳದು. ಮುಖಬಾಗಿಲು ಮೇಲೆ ವೈಷ್ಣವ ದ್ವಾರಪಾಲಕರ ಚಿತ್ರವಿದೆ. ಇದರ ಎದುರು ಪೇಟೆಬೀದಿಯಿದೆ. ಇದು ಉತ್ತರಕ್ಕೆ ತಿರುಮಂಗೈ ಆಳ್ವಾರರ ಗುಡಿಯ ವರೆಗೂ ದಕ್ಷಿಣಕ್ಕೆ ಮೇಲೆ ಹೇಳಿದ ಮಠದ ವರೆಗೂ ಹಬ್ಬಿದೆ. ಈ ತುದಿ ಯಲ್ಲಿ ಮತ್ತೊಂದು ಛತ್ರ ಇಲ್ಲವೇ ಕೂಟವಿದೆ. ಇದು ಶ್ರೀ ವೈಷ್ಣವರ ಊರಾದುದರಿಂದ ಇಲ್ಲಿ ಅನೇಕ ರಾಮಾನುಜಕೂಟ ಗಳಿದ್ದುವು ಎಂದು ಶಾಸನಗಳಿಂದ ತಿಳಿದುಬರುವುದು.

ವಿಠಲಗುಡಿಯ ಮುಖವಾಗಿ ತಿರುಗಿದರೆ ಆ ಗುಡಿಯ ದಕ್ಷಿಣ ದ್ವಾರದ ಎದುರು ರಾಮವಿಠಲ ಗುಡಿಯಿದೆ. ಕ್ರಿ.ಶ. ೧೫೧೩ರ ತಾಮ್ರಶಾಸನದ ಪ್ರಕಾರ ಇಲ್ಲಿ ಮಾಧ್ವರು ಮಠ ಮಾಡಿಕೊಂಡಿ ದ್ದರು. ಪುರಾತತ್ವ ವಿಭಾಗದವರು ಇದನ್ನು ವಿಷ್ಣುಗುಡಿ ನಂ.೩

ಎಂದು ಕರೆದಿದ್ದಾರೆ. ಗರ್ಭಗೃಹದ ಮೇಲ್ಛಾವಣಿ ಹೋಗಿದೆ. ಪ್ರದಕ್ಷಿಣಾಪಥವಿಲ್ಲ. ಶುಕನಾಸಿಕ, ಅಂತರಾಳಿಕಗಳಲ್ಲಿ ವಿಶೇಷ ವಿಲ್ಲವಾದರೂ ರಂಗಮಂಟಪ ಮಾತ್ರ ಸುಂದರವಾಗಿದೆ. ಕಂಬ ಗಳಲ್ಲಿ ವಿಷ್ಣು ಅವತಾರವೂ ಆಳ್ವಾರರ ಚಿತ್ರಗಳೂ ಇವೆ. ರಂಗಮಂಟಪದ ಮೇಲ್ಛಾವಣಿಯಲ್ಲಿ ಚಿಕ್ಕ ಗುಮ್ಮಟವುಳ್ಳ ಅರ್ಧ ವರ್ತುಳಾಕಾರದ ಕಲ್ಲಿನಲ್ಲಿ ಬಿರಗುಗೊಳಿಸುವ ಕುಸುರಿಗೆಲಸ ವಾಗಿದೆ. ಮಂಟಪದ ಪೂರ್ವ, ಪಶ್ಚಿಮ, ಉತ್ತರದ ಕಡೆಗಳಿಂದ ಬಾಗಿಲುಗಳಿವೆ. ಗರ್ಭಗೃಹ ಉತ್ತರಮುಖವಾಗಿದೆ. ಹೊರ ಗೋಡೆಯಲ್ಲಿ ಅನೇಕ ಕುಂಭಪಂಜರಗಳಿವೆ. ಅಲ್ಲಲ್ಲಿ ೮೨,೮೩, ದಳ, ದ೫ ಇತ್ಯಾದಿ ಪ್ರತಿ ದಿಕ್ಕಿಗೂ ಇಡಬೇಕಾಗಿದ್ದ ಕಲ್ಲಿನ ಸಂಖ್ಯೆ ಇವೆ. ಈ ಗುಡಿಯ ದೊಡ್ಡ ಪೌಳಿಯ ಹೊರಗೆ ಡೋಲೋ ತ್ಸವ ಮಂಟಪ ಇದೆ.

ಈ ಗುಡಿಯಿಂದ ಪೂರ್ವಮುಖವಾಗಿ ವಿಠಲದೇವರ ಪೇಟೆ ಇರುವುದು. ಅಲ್ಲಲ್ಲಿ ರಾಮಾನುಜಕೂಟಗಳಿವೆ. ಈ ಕೂಟದಿಂದ ಮುಂದೆ ಸದಾಶಿವರಾಯನ ಕಾಲದಲ್ಲಿ ಕಟ್ಟಿದ ಹನುಮಂತನ ಗುಡಿಯಿದೆ. ಇಲ್ಲಿಯ ಕ್ರಿ.ಶ. ೧೫೫೩ರ ಶಾಸನವೊಂದು ವಿಠಲ ದೇವರ ತೇರುಬೀದಿಯಲ್ಲಿದ್ದ ಮೊದಲಿ ಆಳ್ವಾರರ ಗುಡಿಗೆ ಹಾಗೂ ರಾಮಾನುಜಕೂಟಕ್ಕೆ ಬಿಟ್ಟ ದತ್ತಿಯ ಬಗೆಗೆ ಹೇಳುತ್ತದೆ. ಉತ್ತರಕ್ಕೆ ಹಬ್ಬಿರುವ ವಿಠಲಪೇಟೆಯ ಕೊನೆಯಲ್ಲಿ ಎರಡು ಮಂದಿರಗಳಿವೆ. ಅವುಗಳಲ್ಲಿ ಉತ್ತರಮುಖವಾಗಿರುವ ಗುಡಿ ಯನ್ನು ಪುರಾತತ್ವ ವಿಭಾಗದವರು ಅನೇಕ ವರ್ಷಗಳ ವರೆಗೆ 'ಶಿವ ಟೆಂಪಲ್' ಎಂದು ಕರೆದಿದ್ದುಂಟು. ಅಲ್ಲದೆ ಅವರ ನಕಾಶೆ

ಯಲ್ಲೂ ಇದೇಹೆಸರಿದೆ. ದೇವಕುಂಜರಿಯವರೂ ಹೀಗೇ ಕರೆದಿದ್ದಾರೆ.

ಈ ಗುಡಿಯಲ್ಲಿ ಮಹಾರಂಗಮಂಟಪ, ರಂಗಮಂಟಪ, ಅಂತರಾಳಿಕ, ಶುಕನಾಸಿಕ, ಗರ್ಭಗೃಹ ಹಾಗೂ ಪ್ರದಕ್ಷಿಣಾಪಥಗಳಿವೆ. ರಂಗಮಂಟಪದಲ್ಲಿ ಪಶ್ಚಿಮಕ್ಕೆ ಆಳ್ವಾರರ ಮೂರ್ತಿ ಇರುವ ಗರ್ಭಗೃಹ ಜೋಡಿಸಿದ್ದಾರೆ. ಬಹುಶಃ ಇತ್ತೀಚೆಗೆ ಆ ಮೂರ್ತಿ ಬೇರೆಡೆಯಿಂದ ಇಲ್ಲಿಗೆ ರವಾನೆಯಾಗಿರಬೇಕು. ಮುಖ್ಯಗರ್ಭಗೃಹದ ಪೀಠದ ಮೇಲೆ ಹಂಸವಿದೆ. ಹಂಸ ಸರಸ್ವತಿ ಇಲ್ಲವೇ ಬ್ರಹ್ಮನ ವಾಹನ. ಇಲ್ಲಿ ಮೂರ್ತಿಯಿಲ್ಲದಿರುವ ಕಾರಣ ಯಾವ ದೇವರು ಪ್ರತಿಷ್ಠಿತಗೊಂಡಿತ್ತೋ ತಿಳಿಯದು. ಆದರೆ ಪುರಂದರ ದಾಸರ ಕೃತಿಗಳಲ್ಲಿ 'ಬೊಮ್ಮಮೂರುತಿ ಪುರಂದರ ವಿಠಲ', 'ಬ್ರಹ್ಮವಿಠಲ'ಎಂಬ ಅಂಕಿತವಿದೆ. ಅಲ್ಲದೆ ಶಾಸನವೊಂದರಲ್ಲಿಯೂ ಬ್ರಹ್ಮದೇವರ ಗುಡಿಯ ಉಲ್ಲೇಖವಿದೆ. ಆದುದರಿಂದ ಇದು ಬ್ರಹ್ಮವಿಠಲಗುಡಿಯೇ ಆಗಿರಬೇಕು.

ಈ ಗುಡಿಯ ಪ್ರದಕ್ಷಿಣಾಪಥ ಅನಂತರದ ನಿರ್ಮಾಣವೆಂದು ಕಟ್ಟಡದ ರಚನೆಯಿಂದ ತಿಳಿಯುವುದು. ಗರ್ಭಗೃಹದ ಸುತ್ತಲೂ ಗೋಡೆಯಲ್ಲಿ ಚಿತ್ರಗಳಿವೆ. ರಂಗಮಂಟಪದಲ್ಲಿ ರಂಗಸ್ಥಳದ ಶಿಲೆ ಅಖಂಡವಾದುದು. ಮಹಾಮಂಟಪ ಚಿಕ್ಕದಾದರೂ ವಿಠಲನ ಮಹಾಮಂಟಪವನ್ನು ಹೋಲುತ್ತದೆ. ಮಹಾದ್ವಾರ ದಕ್ಷಿಣಕ್ಕೆ ಇದೆ. ತುರುಕರು ಇಟ್ಟ ಬೆಂಕಿ ಕಲ್ಲು ಕಂಬವನ್ನೂ ಗೋಪುರವನ್ನೂ ಹಾಳುಮಾಡಿದೆ. ರಾಮಾಯಣದ

ವೃಕ್ಷಗಳಿಂದಾಗಿ ಇದನ್ನು ರಾಮಮಂದಿರ ಎಂದು ಕರೆಯುತ್ತಾರೆ.

ಇಲ್ಲಿಂದ ಹೊರಬಂದು ತೇರುಬೀದಿಯಲ್ಲಿ ದಕ್ಷಿಣಮುಖವಾದಾಗ ಚಿಕ್ಕದಾರಿಯೊಂದು ಹರಿದಿದೆ. ಈ ದಾರಿಯಲ್ಲಿ ಕ್ರಮಿಸಿದರೆ ತ್ರಿವಳಿ ಗರ್ಭಗೃಹವುಳ್ಳ ಮೊದಲಿ ಆಳ್ವಾರರ ಗುಡಿಯ ದರ್ಶನವಾಗುವುದು. ವಿಷ್ಣುಭಕ್ತರಾದ ಈ ಆಳ್ವಾರರ ಗುಡಿಯ ದೀಪಸ್ತಂಭದ ಮೇಲೆ ಭಕ್ತನೊಬ್ಬನ ಚಿತ್ರವಿದೆ. ಗುಡಿಗೆ ಪ್ರದಕ್ಷಿಣಾಪಥವಿಲ್ಲ. ಶಿಖರವಿತ್ತೆಂದೂ ತಿಳಿಯುವದಿಲ್ಲ. ವಿಗ್ರಹಪೀಠಗಳು ದಿಕ್ಕಿಲ್ಲದೆ ಅಲ್ಲಲ್ಲಿ ಬಿದ್ದುಕೊಂಡಿವೆ. ಕಂಬಗಳ ಮೇಲೆ ಇರುವ ಚಿತ್ರಗಳಲ್ಲಿ ಶ್ರೀ ವೈಷ್ಣವ ಮೂರ್ತಿಗಳೇ ಅಧಿಕವಾಗಿವೆ. ಗುಡಿಯ ಸುತ್ತಲೂ ಪ್ರಾಂಗಣವಿದ್ದು, ಪೂರ್ವಕ್ಕೆ ರಾಮಾನುಜ ಕೂಟವೂ ಇದೆ.

ಮತ್ತೆ ತೇರುಬೀದಿಯ ಬಲಬದಿಯ ದ್ವಾರದಿಂದ ಹೊಲದಲ್ಲಿ ಇಳಿದು ಸಾಗಿದರೆ ಪರಸ್ಪರ ವಿರುದ್ಧಮುಖವಾಗಿರುವ ಜೋಡು ಗರ್ಭಗೃಹವುಳ್ಳ ಗುಡಿ ಇದೆ. ಪೌಳಿಯ ಕಂಬವೊಂದರಲ್ಲಿ ಬ್ರಾಹ್ಮಣನೊಬ್ಬ ತಾಡೋಲೆ ಗ್ರಂಥವನ್ನು ಓದುತ್ತಿರುವ ಹಾಗೂ ಭಕ್ತನೊಬ್ಬ ಕೈಮುಗಿದುಕೊಂಡು ಕೇಳುತ್ತಿರುವ ಚಿತ್ರವಿದೆ.

ಇಲ್ಲಿಂದ ನದೀಮುಖವಾಗಿ ಕ್ರಮಿಸಿದರೆ ತಿರುಮಂಗೈ ಆಳ್ವಾರರ ಗುಡಿಯಿದೆ. ಸದಾಶಿವರಾಯನ ಆಳ್ವಿಕೆಯಲ್ಲಿ ಅವುಬಳರಾಜಂಗಾರಿ ಎಂಬವನು ಕ್ರಿ. ಶ. ೧೫೫೬ ರಲ್ಲಿ ಇದನ್ನು

ಕಟ್ಟಿಸಿದನು. ಈ ಗುಡಿ ಪೂರ್ವಮುಖವಾಗಿದೆ. ರಂಗ ಮಂಟಪಕ್ಕೆ ಮೂರು ದ್ವಾರಗಳಿವೆ. ದ್ವಾರಗಳ ಮೇಲೆ ಶಂಖ, ಚಕ್ರ, ಊರ್ಧ್ವಪುಂಡ್ರಗಳಿವೆ. ಉತ್ತರ ದ್ವಾರದ ಮೇಲೆ ರಂಗನಾಥನ ಚಿತ್ರವಿದೆ. ತಿರುಮಂಗೈ ಆಳ್ವಾರರು ಶ್ರೇಷ್ಠ ವಿಷ್ಣುಭಕ್ತ. ಹಾಗೆ ಪರಿವರ್ತನಗೊಳಿಸಿದವಳು ಅವನ ಪತ್ನಿ ಕುಮುದವಲ್ಲಿ. ಆದುದರಿಂದ ಗರ್ಭಗೃಹದಲ್ಲಿ ಅವರಿಬ್ಬರಿಗೂ ನಿರ್ಮಿಸಿದ ವಿಗ್ರಹ ಪೀಠಮಾತ್ರವಿದೆ ತಿರುಮಂಗೈ ಆಳ್ವಾರ ಒಳ್ಳೆಯ ಯೋಧನೂ ಹೌದು. ರಂಗಮಂಟಪದ ಕಂಬ ವೊಂದರ ಮೇಲೆ ಕತ್ತಿ, ಗುರಾಣಿ ಹಿಡಿದ ಆಳ್ವಾರನ ಚಿತ್ರವಿದೆ. ಅಲ್ಲದೆ ರಂಗಮಂಟಪದ ಮೇಲ್ಛಾವಣಿಯಲ್ಲಿ ಅಖಂಡ ಶಿಲೆಯಲ್ಲಿ ಹೊಯ್ದ ಚಿತ್ರ ಕಪ್ಪಾಗಿ ಹೊಲಸಾಗಿದ್ದರೂ ಸುಂದರವಾಗಿದೆ.

ಈ ಗುಡಿಯಿಂದ ನದೀಮುಖವಾಗಿ ಹೊಲದಲ್ಲಿ ಸಾಗಿದರೆ ಹಲವು ದ್ವಾರ ಹಾಗೂ ಬೀದಿಗಳು ಕಾಣಿಸುತ್ತವೆ. ಇವು ಬಹುಶಃ ಆನೆಗುಂದಿಯ ಮಾರ್ಗವಿರಬೇಕು.

ತಿರುಮಂಗೈ ಆಳ್ವಾರರ ಗುಡಿಯಿಂದ ಮುಂದುವರಿದರೆ ನೆಲ ದಲ್ಲಿ ಹುಗಿದುಹೋಗಿರುವ ಮಹಾದ್ವಾರವೊಂದಿದೆ. ಇದನ್ನು ಉತ್ಖನನ ಮಾಡಿ ಕಾಯ್ದಿಟ್ಟ ಕಟ್ಟಡಗಳ ಸಾಲಿನಲ್ಲಿ ಸೇರಿಸ ಬಹುದು. ಈ ದ್ವಾರದ ಪಕ್ಕದಲ್ಲಿಯೇ ಒಂದು ಶಿವಾಲಯವಿದೆ.

ವಿಠಲಾಪುರದ ಮುಖ್ಯ ಗುಡಿಯೆಂದರೆ ವಿಜಯವಿಠಲನ ಗುಡಿ. ಯಾವ ಕಾಲದ ನಿರ್ಮಾಣವೆಂಬುದು ತಿಳಿಯದು. ಹದಿನಾರ ನೆಯ ಶತಮಾನದ ನರಸಿಂಹಪುರಾಣದಲ್ಲಿ ಪ್ರೋಳುಗುಂಟೆ ತಿಪ್ಪ

ಎಂಬುವನು ಈ ಗುಡಿಗೆ ಗೋಪುರ ಕಟ್ಟಿಸಿದನೆಂದು ಬರುತ್ತದೆ. ಈ ತಿಪ್ಪ ಇಮ್ಮಡಿ ದೇವರಾಯನ ಕಾಲದಲ್ಲಿ (ದೇವಕುಂಜರಿಯವರ ಪ್ರಕಾರ ಕ್ರಿ. ಶ. ೧೪೨೨-೪೬ರಲ್ಲಿ) ವಿಜಯನಗರಕ್ಕೆ ಬಂದಿದ್ದ. ತಿಪ್ಪನ ಉಲ್ಲೇಖ ನರಸಿಂಹ ಪುರಾಣದಲ್ಲಿ ಇದೆಯಾದರೂ ಅದು ಸಮಕಾಲೀನ ಕೃತಿಯಲ್ಲವಾದ್ದರಿಂದ ಐತಿಹಾಸಿಕವಾಗಿ ಎಷ್ಟು ಸತ್ಯವೋ ತಿಳಿಯದು. ಅಲ್ಲದೆ ಕ್ರಿ. ಶ. ೧೪೦೮ರ ಶಾಸನ ದಲ್ಲಿ ಇಮ್ಮಡಿ ಹರಿಹರನ ಮಂತ್ರಿ ವಿಠಪ್ಪ ತುಂಗಭದ್ರಾತೀರ ದಲ್ಲಿರುವ ವಿಠಲದೇವರಿಗೆ ದಾನ ಬಿಟ್ಟ ವಿವರವೂ ಇದೆ. ಈ ಗುಡಿಯ ಬಗೆಗೆ ಇರುವ ಮತ್ತೊಂದು ಶಾಸನವೆಂದರೆ ಕಡಪಾ ಜಿಲ್ಲೆಯ ಕಾಮಲಾಪುರಂ ತಾಲೂಕಿನಲ್ಲಿ ದೊರೆತದ್ದು. ಕ್ರಿ.ಶ. ೧೫೦೩ರಲ್ಲಿ ಸಾಳುವ ಇಮ್ಮಡಿ ನರಸಿಂಹ ತುಂಗಭದ್ರಾತೀರದ ವಿಠಲೇಶ್ವರ ಸನ್ನಿಧಿಯಲ್ಲಿ ಪಲಗಿರಿ ಚನ್ನಕೇಶವ ದೇವರಿಗೆ ದಾನ ಕೊಟ್ಟ ವಿವರ ಇದರಲ್ಲಿದೆ. ಅನಂತರ ೧೫೧೩ರ ಶ್ರೀಮುಖ ಸಂವತ್ಸರದಲ್ಲಿ ಕೃಷ್ಣದೇವರಾಯ ವಿಠಲದೇವರಿಗೆ ದಾನವಿತ್ತ ಶಾಸನಗಳು ಈ ಗುಡಿಯ ದಕ್ಷಿಣ ಗೋಡೆ, ರಂಗಮಂಟಪದ್ವಾರ ಹಾಗೂ ಪೂರ್ವದ್ವಾರದ ಮೇಲೆ ಇವೆ. ಅಲ್ಲದೇ ಮುದ್ದಲಾ ಪುರದಲ್ಲಿ ಆಂಗೀರಸ ಸಂವತ್ಸರದಲ್ಲಿ ರಾಯ ಕೊಟ್ಟ ದಾನದ ಉಲ್ಲೇಖವೂ ಈ ವೇಳೆಯಲ್ಲಿಯೇ ತಿರುಮಲಾದೇವಿ ಹಾಗೂ ಚಿನ್ನಾದೇವಿಯರು ವಿಠಲನಿಗೆ ಗೋಪುರ ಕಟ್ಟಿಸಿದರು ಎಂದೂ ಉಲ್ಲೇಖ ಬರುತ್ತದೆ. ಆದರೆ ಪ್ರೊಳುಗುಂಟಿ ತಿಪ್ಪ ಕಟ್ಟಿಸಿದ ಗೋಪುರದ ಉಲ್ಲೇಖ ಮಾತ್ರ ಬರಲಿಲ್ಲ.

ಈ ಗುಡಿಯ ವೀಕ್ಷಣೆಯಿಂದ ಇದು ಏಕಕಾಲದ ನಿರ್ಮಾಣ ವಲ್ಲ ಎಂದು ತಿಳಿಯುವದು. ಮಹಾರಂಗಮಂಟಪದಲ್ಲಿರುವ ಶಾಸನದ ತುಂಡಿನಿಂದ ಮಂಟಪವನ್ನು ಕ್ರಿ.ಶ.೧೫೪೧ ರ ನಂತರ ಜೋಡಿಸಲಾಗಿದೆ ಎಂದು ತಿಳಿದುಬರುವುದು. ಅಚ್ಯುತರಾಯ ಸುವರ್ಣಮೇರು, ಆನಂದನಿಧಿಗಳನ್ನು ದಾನಮಾಡಿದ್ದು ಇದೇ ಗುಡಿಯಲ್ಲಿ. ಇವನ ಕಾಲದಲ್ಲಿ ಗುಡಿಯ ಗೋಪುರಗಳಿಗೆ ಹೊನ್ನಿನ ಕಳಸವನ್ನು ಉದ್ದಿ ತಿಂಮಪ್ಪನ ಮಗ ಚಪರದ ರಘುವಪ್ಪನಾಯಕ ಮಾಡಿಸಿದನು.

ವಿಠಲಗುಡಿಯ ರಂಗಮಂಟಪದಿಂದ ಹೊರಬಂದರೆ ಎದುರಿಗೆ ಹಾಳುಬಿದ್ದ ವೇದಿಕೆ ಇದೆ. ಅಚ್ಯುತರಾಯನ ಕಾಲದಲ್ಲಿ ಅರಸನಿಗೆ ಪುಣ್ಯವಾಗಲೆಂದು ಹನ್ನೆರಡು ಆಳ್ವಾರರ ಹಾಗೂ ತಿರುಕಾಂಚಿ ನಂಬಿ ಆಳ್ವಾರರ ಮೂರ್ತಿಗಳನ್ನು ಇಲ್ಲಿ ಸ್ಥಾಪಿಸಿದ್ದರೆಂದು ಶಾಸನದಿಂದ ತಿಳಿದುಬರುವುದು. ಉತ್ತರ ಗೋಪುರದ ಸಮೀಪವಿರುವ ಚಿಕ್ಕಗುಡಿಯ ಗೋಡೆ ಮೇಲಿನ ಶಾಸನದಿಂದ ಇದು ಆದಿನಾರಾಯಣಸ್ವಾಮಿ ಗುಡಿ ಎಂದೂ ತಿಳಿಯುವದು. ಪೂರ್ವಮುಖವಾಗಿರುವ ಈ ಗುಡಿಗೆ ಗರ್ಭಗೃಹ, ಶುಕನಾಸಿಕ, ಅಂತರಾಳಿಕ ಹಾಗೂ ದೊಡ್ಡ ಮಂಟಪ ಇದೆ. ಪ್ರದಕ್ಷಿಣಾಪಥವಿಲ್ಲ. ಉತ್ತರಕ್ಕೆ ಇರುವ ಮತ್ತೊಂದು ಗರ್ಭಗೃಹಕ್ಕೆ ಗಚ್ಚುಗಾರೆಯ ದ್ವಾರಪಾಲಕರಿದ್ದಾರೆ. ಕಂಬಗಳಲ್ಲಿ ಕುಸುರಿಗೆಲಸ ಆಗಿದ್ದರೂ ನಯವಾಗಿಲ್ಲ. ಹೊರಗೋಡೆಯಲ್ಲಿ ಹಲವಾರು ಚಿತ್ರಗಳನ್ನು ಕೊರೆದಿದ್ದಾರೆ. ಗುಡಿಯ ಪೀಠದ ಕೆಳಗಿರುವ ಶಾಸನದಿಂದ ವ್ಯಾಸತೀರ್ಥರು ಇಲ್ಲಿ ಕ್ರಿ. ಶ.

೧೫೩೭ ರಲ್ಲಿ ಯೋಗನರಸಿಂಹನನ್ನು ಸ್ಥಾಪಿಸಿದ್ದರೆಂದು ತಿಳಿಯುವುದು. ಇಲ್ಲಿಂದ ಮುಂದೆ ದಕ್ಷಿಣಕ್ಕೆ ಮತ್ತೊಂದು ಮಂಟಪ ಇದೆ. ಇಲ್ಲಿ ಕ್ರಿ. ಶ. ೧೫೪೫ ರಲ್ಲಿ ಜಂಬುಲದಿನ್ನೆ ಚಿಕ್ಕರಾಜು ಗಾರು ಲಕ್ಷ್ಮೀನಾರಾಯಣನನ್ನು ಪ್ರತಿಷ್ಠಾಪಿಸಿ ದಾನವಿತ್ತ ಶಾಸನವಿದೆ. ಗರ್ಭದ್ವಾರದಲ್ಲಿ ದ್ವಾರಪಾಲಕರೂ ತೊಲೆಯಲ್ಲಿ ಗಜಲಕ್ಷ್ಮಿಯೂ ಇರುವರು. ಇಲ್ಲಿರುವ ಮತ್ತೊಂದು ಶಾಸನ ಈ ಗುಡಿಯನ್ನು 'ಕಂನಾಡ ವಿಠಲೇಶ್ವರ' ಎಂದು ಕರೆದಿದೆ. ಮಂಟಪದ ಕಂಬ ಸಾಲುಗಳಲ್ಲಿ ಹಲವು ಚಿತ್ರಗಳನ್ನು ಕೊರೆಯ ಲಾಗಿದೆ. ಈ ಮಂಟಪದಿಂದ ಮುಂದೆ ಪೌಳಿಯ ಪೀಠದಲ್ಲಿ ಕೊರೆದ ಆನೆ, ಒಂಟೆಗಳ ಸಾಲಿನಲ್ಲಿ ಒಂದು ಜಿರಾಫೆಯೂ ಇದೆ ಯಾದುದರಿಂದ ಆ ಕಾಲಕ್ಕೆ ಜಿರಾಫೆ ತಿಳಿದಿತ್ತು ಎಂಬ ಅಂಶ ವ್ಯಕ್ತವಾಗುವುದು.

ಈ ಪೌಳಿಯ ಎದುರಿಗೆ ಲಕ್ಷ್ಮೀ ಗುಡಿಯೂ ಅದರ ಎದು ರಿಗೆ ಕ್ರಿ. ಶ. ೧೫೧೬ ರಲ್ಲಿ ಕೃಷ್ಣದೇವರಾಯ ಕಟ್ಟಿಸಿದ ನೂರು ಕಾಲು ಮಂಟಪವೂ ಇದೆ. ಇದು ಹೆಚ್ಚು ಉದ್ದವಿದೆಯಾದರೂ ಅಗಲವಾಗಿಲ್ಲ. ಪ್ರತಿ ಕಂಬಗಳ ಅಂತರ ಒಂದು ಒಂದೂವರೆ ಮಾರು. ಕಂಬ ಹಾಗೂ ಹೊರಗೋಡೆಯಲ್ಲಿರುವ ನೃತ್ಯ ಶಿಲ್ಪಗಳ ವೀಕ್ಷಣೆಯಿಂದ, ಪಾಯೆಸ್ ವರ್ಣಿಸಿದ ನೃತ್ಯಶಾಲೆ ಇದೇ ಇರಬಹುದೆಂದು ಹೇಳಲು ಅವಕಾಶವಿದೆ.

ಇಲ್ಲಿಂದ ಮುಂದೆ ದಕ್ಷಿಣದ್ವಾರವಿದೆ. ಕೃಷ್ಣದೇವರಾಯನ ಅರಸಿಯರು ಕಟ್ಟಿಸಿದ ಈ ಗೋಪುರ ಹಾಳಾಗಿದ್ದರೂ ತನ್ನ

ಆಕರ್ಷಣೆ ಕಳೆದುಕೊಂಡಿಲ್ಲ. ಈ ಗೋಪುರದಿಂದ ಮುಂದೆ ಮಂಟಪವೊಂದಿದೆ. ಬಹುಶಃ ಕೃಷ್ಣದೇವರಾಯ ಗಜಪತಿಯ ಮೇಲೆ ಸಾಧಿಸಿದ ವಿಜಯೋತ್ಸವದ ಸ್ಮಾರಕ ಇದಾಗಿರಬೇಕು. ಇಲ್ಲಿ ಆನೆ ಹಾಗೂ ವಿಚಿತ್ರಪ್ರಾಣಿಗಳ ಮೇಲೆ ಸವಾರರು ಬೆನ್ನಿಗೆ ಬೆನ್ನು ಅಂಟಿಸಿ ಕುಳಿತಿದ್ದಾರೆ. ಮಂಟಪದ ದಕ್ಷಿಣ ಕ್ಕಿರುವ ಎರಡು ಕಂಬಗಳಲ್ಲಿ ಪೋರ್ತುಗೀಜರನ್ನು ಹೋಲುವ ಚಿತ್ರಗಳೂ ಇವೆ. ಆನೆಯ ಮೇಲೆ ಎರಗಿರುವ ಸಿಂಹದ ಚಿತ್ರ, ಗಜಪತಿಗೆ ಕೃಷ್ಣದೇವರಾಯನು ಸಿಂಹಸ್ವಪ್ನ ಆಗಿದ್ದ ಎಂಬುದರ ಸಂಕೇತ ಆಗಿರಬೇಕು. ಮಂಟಪದ ಎದುರಿಗೆ ಪಾಕಶಾಲೆಯೂ ಕಲ್ಲಿನ ರಥವೂ ಇದೆ. ಅಂದರೆ ಗರುಡನಿಗೆ ಗುಡಿ ಕಟ್ಟುವ ಬದಲು ರಥ ಕಟ್ಟಿರುವುದು ಇದೇ ಮೊದಲು. ಹಿಂದೆ ಪೀಠ, ತುಳಸಿವನ ಮತ್ತು ಧ್ವಜಸ್ತಂಭಕ್ಕೆ ಪೀಠ ಇದೆ. ಒಂದು ಪೀಠದಲ್ಲಿ ದಿಕ್ಸೂಚಕವಾಗಿ ವು ೧, ವು ೨, ದ ೧, ದ ೨, ಪ ೧, ಪ ೨, ಪೂ ೧, ಪೂ ೨, ಎಂದು ಬರೆದಿದ್ದಾರೆ.

ಪೂರ್ವದ್ವಾರದ ಪಕ್ಕದಲ್ಲಿ ಎತ್ತರವಾದ ಒಂದು ಮಣ್ಣಿನ ಗುಡ್ಡವಿದೆ. ಅದನ್ನು ಉತ್ಖನನಗೊಳಿಸಿದರೆ ಐತಿಹಾಸಿಕ ಸಂಗತಿಗಳು ಬೆಳಕಿಗೆ ಬರುವುದು ಸಾಧ್ಯವಿದೆ.

ವಿಜಯವಿಠಲನ ಗುಡಿ ಪೌಳಿಯ ಮಧ್ಯದಲ್ಲಿದೆ. ಆರಂಭದಲ್ಲಿ ಗರ್ಭಗೃಹ ಮಾತ್ರವುಳ್ಳ ಇದಕ್ಕೆ ಕೃಷ್ಣದೇವರಾಯನ ಕಾಲದಲ್ಲಿ ರಂಗಮಂಟಪ, ಪ್ರದಕ್ಷಿಣಾಪಥದ ಜೋಡಣೆಯಾಗಿರ

ಬೇಕು. ಪ್ರದಕ್ಷಿಣಾಪಥ ಕತ್ತಲೆಯಿಂದ ಆವೃತವಾಗಿದೆ. ಗರ್ಭಗೃಹದ ಗೋಡೆಯಲ್ಲಿ ಸುಂದರ ಕುಂಭಪಂಜರ ಹಾಗೂ ಗೂಡುಗಳಿವೆ. ಪ್ರದಕ್ಷಿಣಾಪಥದ ಪಾವಟಿಗೆಗಳು ಅನಂತರದ ರಚನೆಯಾಗಿವೆ.

ರಂಗಮಂಟಪದ ಕಂಬಚಿತ್ರಗಳಲ್ಲಿ ರಾಮಾಯಣ, ಕೃಷ್ಣ ಲೀಲೆ, ಎರಡು ತಲೆಯ ವೀಣೆ, ಮೂರು ತಲೆಯ ಕಿನ್ನರಿ ಹಿಡಿದಿರುವ, ವ್ಯಾಪಾರಕ್ಕೆ ಹೊರಟ ಪತಿ, ಶೋಕಿಸುತ್ತಿರುವ ಪತ್ನಿ ಮುಂತಾದವು ಕಣ್ಮನಗಳನ್ನು ತಮ್ಮೆಡೆಗೆ ಸೆಳೆದುಕೊಳ್ಳು ತ್ತವೆ.

ಮಹಾರಂಗಮಂಟಪ ಮೂರು ದೊಡ್ಡ ಭಾಗವಾಗಿದೆ. ತುರುಕರ ಬೆಂಕಿ ಹಾವಳಿಗೆ ಮೇಲ್ಛಾವಣಿ ಸಿಡಿದು ಹೋಗಿದ್ದರೂ ಉತ್ತರ ಹಾಗೂ ದಕ್ಷಿಣ ಭಾಗದ ಮಂಟಪಗಳು ಸ್ಥಿರವಾಗಿವೆ. ಈ ಮಂಟಪದಲ್ಲಿ ೫೬ ಕಂಬಗಳಿದ್ದು, ಪ್ರತಿಯೊಂದೂ ೩.೬ ಮೀಟರು ಎತ್ತರವಾಗಿಯೂ ೧.೫ ಮೀಟರು ಅಗಲ ವಾಗಿಯೂ ಇವೆ. ಇಂತಹ ದೈತ್ಯಾಕಾರದ ಕಲ್ಲು ಕಂಬಗಳಿಂದ ಮಂಟಪಕ್ಕೆ ಶೋಭೆ ಒಳಗೊಳ್ಳದೆಂದು ಗ್ರಹಿಸಿದ ಶಿಲ್ಪಿ ಅವು ಗಳಲ್ಲಿಯೇ ಚಿಕ್ಕ ಚಿಕ್ಕ ಕಂಬಗಳನ್ನು ಬಿಡಿಸಿದ್ದಾನೆ. ಈ ಕಂಬಗಳಲ್ಲಿ ಕಣಗಳ ವ್ಯವಸ್ಥೆ ವಿಶೇಷವಾದುದು. ಈ ಗುಣ ದಿಂದಲೇ ಕಂಬಗಳಲ್ಲಿ ಸಂಗೀತದ ನಾದ ಮಾಧುರ್ಯ ಹೊರ ಹೊಮ್ಮುತ್ತದೆ. ಅಂದರೆ ತಾಳಬದ್ಧವಾಗಿ ಇವನ್ನು ಬಡಿದಾಗ ತಬಲಾ, ವೀಣಾ, ಶಂಖಗಳ ನಾದ ಚಿಮ್ಮಿ ಬರುತ್ತದೆ. ಈ

ಆಕರ್ಷಣೆಗೆ ಒಳಗಾಗಿ ತಿಳಿಯುದವರು ಕುಟ್ಟಿ ಬಡಿದು ಕಂಬಗಳನ್ನು ಹಾಳುಮಾಡಿದ್ದಾರೆ. ಹಾಗೆ ಮಾಡದೆ ಮೃದುವಾಗಿ ಬಾರಿಸಿ ಸಂಗೀತ ನಾದವನ್ನು ಕಂಬಗಳಿಂದ ಕೇಳುವ ಬುದ್ಧಿ ತಿಳಿವಳಿಕೆ ಇಲ್ಲದವರಲ್ಲಿ ಬೆಳೆದು ಬರಬೇಕು. ಆಗ ನಿಜವಾದ ಕಲೆಯ ಅರ್ಥವೂ ಅದರ ರಕ್ಷಣೆಯೂ ಅವರಲ್ಲಿ ಉಂಟಾದಂತೆ.

ಉತ್ತರ, ದಕ್ಷಿಣ ಮಂಟಪಗಳ ಮೇಲ್ಭಾವಣಿಯ ಮಧ್ಯೆ ಅಖಂಡಶಿಲೆಯ ಗೋಲಾಕಾರದ ಚಿಕ್ಕ ಕಟ್ಟಡವಿದೆ. ಇದರ ಮಧ್ಯೆ ಕಮಲದ ತೂಗು ಮೊಗ್ಗುಗಳಿದ್ದು ಅವನ್ನು ಗಿಳಿಗಳು ಚುಂಚಿನಿಂದ ಹಿಡಿದುಕೊಂಡಿವೆ. ಇಲ್ಲಿಯೇ ಡೋಲೋತ್ಸವ ನಡೆಯುತ್ತಿರಬೇಕು ಎಂದು ತಿಳಿಯಲು ಕುರುಹುಗಳು ಈ ಗೋಲದಲ್ಲಿವೆ. ದಕ್ಷಿಣ ಮಂಟಪದಲ್ಲಿ ಪುಷ್ಪಬೋದಿಗೆಯ ಮಾಂಗಾಯಿ ಅಥವಾ ಬಾಳೆ ಹೂವುಗಳು ಬೇರೆ ಬೇರೆ ಶಿಲೆಯ ಜೋಡಣೆಯಾಗಿವೆ. ಮೇಲ್ಭಾವಣಿಯ ಉದ್ದುದ್ದ ಕಲ್ಲುತೊಲೆಗಳಲ್ಲಿ ತೆರಪಿಲ್ಲದಂತೆ ಚಿತ್ರ ಬಿಡಿಸಲಾಗಿದೆ. ಕಂಬಗಳ ಮೇಲೆ ದೊಡ್ಡ ದೊಡ್ಡ ಜೋಡಿ ಬೋದಿಗೆಗಳಿವೆ. ಇವುಗಳ ಮೇಲಿನ ಕಲ್ಲಿನಲ್ಲಿ ರಾಮಾಯಣ, ಮಹಾಭಾರತ, ಕೃಷ್ಣಲೀಲೆಗಳು ಚಿತ್ರಿತವಾಗಿವೆ. ದಾಸರ ಕೃತಿಗಳ ವರ್ಣನೆಯನ್ನು ಈ ಚಿತ್ರಗಳಲ್ಲಿ ಗುರುತಿಸಬಹುದು.

ಪೂರ್ವದ ಸೋಪಾನವೇರಿದರೆ ಇಕ್ಕೆಲಗಳ ಕಂಬಗಳಲ್ಲಿರುವ ನರ್ತಕಿ, ಸಂಗೀತಗಾರ್ತಿಯರ ಸೌಂದರ್ಯ ಅಸದಳವಾದುದು. ತಲೆಯ ಹಿಂದೆ ಪರದೆ ಹಿಡಿದು ನಿಂತಿರುವ ನರ್ತಕಿಯ

ಭಂಗಿಯಂತೂ ನಿಜಕ್ಕೂ ಮನಮೋಹಕ. ಮುಂದೆ ಬಲಕ್ಕಿರುವ ಕಂಬವೊಂದರಲ್ಲಿ ಗೋಪಿಯರ ವಸ್ತ್ರಾಪಹರಣಮಾಡಿ ಮರವೇರಿ ಕುಳಿತ ಗೋಪಾಲನ ಚಿತ್ರ ಕಾವ್ಯಮಯತೆಯನ್ನು ಪಡೆದಿದೆ. ಅಲ್ಲದೆ ಮಹಾಮಂಟಪದ ಉತ್ತರದ ಕಂಬವೊಂದರಲ್ಲಿ ನರಸಿಂಹ ಮೂರ್ತಿ ಇದೆ. ಅದರ ಪಕ್ಕಕ್ಕೇ ಇರುವ ಏಕತಾರಾಧಾರಿ ಭಕ್ತನ ಚಿತ್ರ ಪುರಂದರದಾಸರಿರಬಹುದೆಂದು ಅನಿಸುವುದು.

ವಿಠಲಗುಡಿಯ ಪೂರ್ವದ್ವಾರದ ಉತ್ತರಕ್ಕೆ ಇರುವ ಮಂಟಪದಲ್ಲಿ ಉಳಿದಿರುವ ಚಿತ್ರಗಳಲ್ಲಿ ಕಪೋತಗಳು ಸುಂದರ ವಾಗಿವೆ. ಇದರ ಎದುರು ಮೂರು ತುಂಡುಗಳಾಗಿ ಬಿದ್ದಿರುವ ಭೀಮಾಕಾರದ ಗರುಡಗಂಬವನ್ನು ಪುರಾತತ್ವ ವಿಭಾಗದವರು ಮೊದಲಿನ ಸ್ಥಿತಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ಇನ್ನು ವಿಠಲ ಗುಡಿಯ ಸುತ್ತ ತೇರುಬೀದಿ ಇತ್ತೆಂದು ಕಂಡುಬರುವುದು. ಪೂರ್ವಕ್ಕಿರುವ ಮುಖ್ಯ ಬೀದಿಯಲ್ಲಿ ಸ್ವಲ್ಪ ಮುಂದೆ ಇರುವ ವಿಠಲನ ತೆಪ್ಪೋತ್ಸವ ಕೊಳ ರಮಣೀಯವೂ ದೊಡ್ಡದೂ ಆಗಿದೆ. ಈಗಲೂ ನೀರು ತುಂಬಿಕೊಂಡಿರುವ ಈ ಕೊಳಕ್ಕೆ ಶಿಖರವುಳ್ಳ ಮಂಟಪವಿದೆ.

ಇಲ್ಲಿಂದ ಮುಂದೆ ಸದಾಶಿವರಾಯನ ಕಾಲದಲ್ಲಿ ಕಟ್ಟಿದ ಪರಾಂಕುಶ ಮಂಟಪವಿದೆ. ಇಲ್ಲಿ ಒಂದೆರಡು ಮಾತು ಅವಶ್ಯ ವೆನಿಸುತ್ತದೆ. ಅಂದರೆ ಸದಾಶಿವರಾಯನ ಕಾಲದ ಕಟ್ಟಡಗಳು ಬಹಳ ಸುಂದರವಾಗಿಯೂ ಕಲಾಪೂರ್ಣವಾಗಿಯೂ ಇವೆ. ತಿರುಮಂಗೈ ಆಳ್ವಾರರ ಗುಡಿ, ವಿಠಲಗುಡಿಯ ಮಹಾರಂಗ

ಮಂಟಪ, ಲಕ್ಷ್ಮೀನಾರಾಯಣ ಗುಡಿಗಳನ್ನು ಇದಕ್ಕೆ ಉದಾಹರಿಸಬಹುದು. ವಿಠಲಗುಡಿಯ ಮಹಾರಂಗಮಂಟಪದ ಬಗೆಗೆ ಎಷ್ಟು ಹೇಳಿದರೂ ಕಡಿಮೆಯೇ. ಅಲ್ಲಿ ಪ್ರತಿಬಿಂಬಿಸಿದ ಜಾಣ ಶಿಲ್ಪಿಯ ಬೃಹತ್‌ಕಾರ್ಯ ಎದೆ ಬೆಚ್ಚಿಸುವಂತಹದು. ಶಿಲ್ಪಿಗಳು ಕಲಾರಾಧನೆಯಲ್ಲಿ ತಮ್ಮ ಜೀವನವನ್ನೇ ಮುಡಿಪು ಹಾಕಿದವರು. ಆದರೆ ಈಗಿನ ಹಾಳುಕೊಂಪೆಯ ಸ್ಥಿತಿ ಮನಕುದಿಸುವ, ಕರುಳು ಕತ್ತರಿಸುವ ಹೃದಯದ್ರಾವಕ ಕರ್ಮಕಥೆಯಾಗಿದೆ.

ಹಂಪೆ ಕಂಪಿಲಿ ದಾರಿಯಲ್ಲಿ ಎಡಕ್ಕೆ ಇರುವ ಗುಡ್ಡದ ಮೇಲಿರುವುದೇ ರಘುನಾಥಗುಡಿ. ಪೂರ್ವ ಹಾಗೂ ದಕ್ಷಿಣಕ್ಕೆ ಗೋಪುರಗಳಿವೆ. ಒಳಪ್ರವೇಶಕ್ಕೆ ಮೊದಲು ಗರುಡಗಂಬ ಇದೆ. ಮಹಾರಂಗಮಂಟಪ, ರಂಗಮಂಟಪ, ಅಂತರಾಳಿಕ, ಗರ್ಭಗೃಹಗಳಿವೆ. ಅಖಂಡ ಶಿಲೆಯ ರಾಮ, ಸೀತೆ, ಲಕ್ಷ್ಮಣ, ಹನುಮಂತರ ವಿಗ್ರಹ ಗರ್ಭಗೃಹದಲ್ಲಿದೆ. ಅನಂತರದ ಜೋಡಣೆಯಾದ ಗರ್ಭಗೃಹ ಸರಳವಾಗಿದೆ. ಅದರ ಮೇಲೆ ತ್ರಿತಳ ವಿಮಾನ ಇದೆ. ಇದರ ಪಕ್ಕಕ್ಕೇ ದೇವಿಗುಡಿ ಇದೆ. ಮುಖ್ಯ ಮಂದಿರದ ಬಲಕ್ಕೆ ವಿಠಲಗುಡಿಯ ನೂರುಕಾಲ ಮಂಟಪದಂತೆ ಮಂಟಪವಿದೆ. ಇಲ್ಲಿಯ ಕಲೆ ತುಂಬಾ ನಯವಾದುದು.

ಈ ಗುಡಿಯ ಪೂರ್ವದ್ವಾರದಿಂದ ಹೊರಬಂದರೆ ಹನುಮಂತ ಗುಡಿಯೂ ಮಂಟಪವೂ ಇದೆ. ಇಲ್ಲಿಯೇ ಕಲ್ಲು ಗುಂಡುಗಳಿವೆ. ಅಲ್ಲದೆ ರಘುನಾಥಗುಡಿಯ ಹಿಂದಿರುವ ಲಕ್ಷ್ಮಣ ದೋಣಿಯಲ್ಲಿ ಲಿಂಗಬಸವ ಮೂರ್ತಿಯನ್ನು ಕೊರೆಯಲಾಗಿದೆ.

ಇಲ್ಲಿಯೇ ಒಂದು ಶಿವಾಲಯವಿದೆ. ದೇವರಾಯನ ಕಾಲದ ಈ ದೇವಾಲಯಕ್ಕೆ ಕಾದಂಬರಿಗುಡ್ಡ ಎಂದು ಹೆಸರಿತ್ತೆಂದು ಪಂಪಾ ಸ್ಥಾನ ವರ್ಣನೆಯಲ್ಲಿದೆ.

ಹಂಪೆ ಕಂಪಿಲಿ ಮಾರ್ಗದಲ್ಲಿಯೇ ಕೋಟೆಗೋಡೆಯಿದೆ. ಕಾಮಾಲಾಪುರ ಮಾರ್ಗದಲ್ಲಿ ಎಡಕ್ಕೆ ಕಾಣಿಸುವ ಗುಡ್ಡಗಳಲ್ಲಿ ಇರುವ ಹಲವು ಗುಡಿಗಳಲ್ಲಿ ಒಂದರಲ್ಲಿ ವೀರಭದ್ರನ ಸುಂದರ ಮೂರ್ತಿಯೂ ಅದರ ಪಕ್ಕದಲ್ಲಿ ಅಂಜಲಿಬದ್ಧ ಭಕ್ತನ ಚಿತ್ರವೂ ಇದೆ.

ಈಗ ಗಾನಗಿತ್ತಿಗುಡಿಗೆ ಬರೋಣ. ಶಾಸನಗಳಲ್ಲಿ ಮಾತ್ರ ಇದನ್ನು 'ಕುಂತು ಜಿನಾಲಯ' ಎಂದು ಕರೆಯಲಾಗಿದೆ. ಕ್ರಿ. ಶ. ೧೩೮೫ ರಲ್ಲಿ ಎರಡನೆಯ ಹರಿಹರನ ಮಂತ್ರಿ ಈ ಜಿನಾಲಯ ಕಟ್ಟಿಸಿ ಮೂರ್ತಿ ಪ್ರತಿಷ್ಠಾಪಿಸಿದನು. ತಲವಿನ್ಯಾಸ ದಿಂದ ವಿಮಾನದ ವರೆಗೂ ಇದು ಕಲ್ಲುಕಟ್ಟಡವಾಗಿದೆ. ನೆಲಗಟ್ಟು ಮಣಿಕುಟ್ಟಿಮವಾಗಿತ್ತೆಂದೂ ಇಲ್ಲಿ ಬಾಲಿಕೆಯರು ಆಡುತ್ತಿದ್ದ ರೆಂದೂ ಶಾಸನವೊಂದು ಈ ಗುಡಿಯನ್ನು ವರ್ಣಿಸಿದೆ. ಮತ್ತೊಂದು ಶಾಸನದಿಂದ ಶಾಂತಿ ಜಿನಾಲಯವೂ ಇದ್ದಿತೆಂದು ತಿಳಿದುಬರುವುದು.

ಈ ಗುಡಿಯ ಹಿಂದೆ ಇರುವ ಭೀಮನ ಅಗಸೆಯಲ್ಲಿ ಭೀಮನ ಚಿತ್ರಗಳಿವೆ. ಮುಂದುವರಿದರೆ ಎದುರಿಗೆ ಹಾಳಾಗಿರುವ ಒಂದು ಶಿವಾಲಯವೂ ಕೋಟೆದ್ವಾರವೂ ಇದೆ. ಈ ದ್ವಾರ ದಿಂದ ಚಂದ್ರಶೇಖರ ಗುಡಿಗೂ ಕಮಲಮಹಲಿಗೂ ದಾರಿಯಿದೆ.

ಅಲ್ಲದೆ ಜಿನಾಲಯದಂತಹ ಒಂದು ಗುಡಿಗೆ ತಲುಪುವುದಾದರೂ ಅದರಿಂದ ಯಾವುದೇ ಮಾಹಿತಿ ದೊರೆಯುವುದಿಲ್ಲ. ಇಲ್ಲಿಂದ ಗೋರಿ ಕೆಳಗಿನ ಗ್ರಾಮದಲ್ಲಿ ಮುಸಲ್ಮಾನ ಗೋರಿಗಳೂ ವೈಷ್ಣವಾಲಯಗಳೂ ಇವೆ.

ಗೋರಿಗಳಿಂದ ಸ್ವಲ್ಪ ಎಡಕ್ಕೆ ಕೋಟೆಗೋಡೆ ಇದೆ. ಇದರ ಮೇಲೆ ಸಾಗಿದರೆ ಹಲವು ಮಂಟಪ, ಗುಡಿಗಳೂ ಲಿಂಗದ ಎಡಬಲದಲ್ಲಿ ಹಾವು, ಚೇಳೂ, ವಿಷ್ಣು, ಭೂದೇವಿ, ಶ್ರೀದೇವಿಯರ ಚಿತ್ರಗಳಿವೆ. ಕೋಟೆಯೊಳಗೆ ಹಲವು ಗುಪ್ತದ್ವಾರಗಳಿವೆ. ಒಂದು ಗುಪ್ತದ್ವಾರದ ಮೂಲಕ ಸಾಗಿದರೆ ಮುರಿದಿರುವ ಶಿವಾಲಯವಿದೆ. ಈ ಗೋಡೆಯೊಡನೆ ಪೂರ್ವಕ್ಕೆ ತಾಲಾರಿಘಟ್ಟ ದ್ವಾರಕ್ಕೂ ಪಶ್ಚಿಮಕ್ಕೆ ರಾಣಿವಾಸ ಮತ್ತಿತರೆಡೆಗಳಿಗೆ ತಲುಪಬಹುದು. ಅಂತೂ ಈ ಗೋಡೆ ಸಂಶೋಧಕರಿಗೆ ಒಂದು ಸಂಶೋಧನಾ ಭಂಡಾರವೇ ಸರಿ.

ವರದಾಜಮ್ಮನ ಪಟ್ಟಣವನ್ನು ಅಚ್ಯುತರಾಯ ತನ್ನ ಪತ್ನಿಯ ಪ್ರೀತಿಗಾಗಿ ಕಟ್ಟಿಸಿದ. ರಘುನಾಥಗುಡಿ ಇರುವುದು ಇಲ್ಲಿಯೇ ದೊಡ್ಡದಾದ ಗರ್ಭಗೃಹಕ್ಕೆ ತಕ್ಕಂತೆ ಶುಕನಾಸಿಕ, ಅಂತರಾಳಿಕ, ಪ್ರದಕ್ಷಿಣಾಪಥ, ಮಹಾಮಂಟಪ, ರಂಗಮಂಟಪಗಳಿವೆ. ಜೋಡುಗರ್ಭವುಳ್ಳ ಮಂದಿರವೂ ಇಲ್ಲಿದೆ. ಪೂರ್ವಕ್ಕೆ ವಿಠಲಗುಡಿಯ ನೂರುಕಾಲು ಮಂಟಪವನ್ನು ಹೋಲುವ ಮಂಟಪ ಇದೆ. ಈ ಗುಡಿ ದೊಡ್ಡದಾಗಿಯೂ ಭವ್ಯವಾಗಿಯೂ ಇದೆಯಾದರೂ ಶಿಲ್ಪಕಲೆಯಿಂದ ಆಕರ್ಷಣೆಯಿಲ್ಲ. ಗೋಪುರ

ಗಳು ಪೂರ್ವ ಮತ್ತು ಉತ್ತರಕ್ಕಿವೆ. ಇಲ್ಲಿ ಪೇಟೆ ಇದ್ದಿರಬಹುದಾದರೂ ಈಗ ಉಳಿದಿರುವುದು ಲೋಕಪಾವನೆ ಕೊಳ ಮಾತ್ರ. ಇದರಲ್ಲಿ ಗೋಪುರವುಳ್ಳ ಮಂಟಪವಿದೆ. ಮುಂದೆ ಹೊಲಗಳಲ್ಲಿ ಸುಂದರ ಶಿಖರವುಳ್ಳ ಗುಡಿಯೂ ಅಲ್ಲಲ್ಲಿ ಶಿಲ್ಪದ ತುಂಡುಗಳೂ ಸುಂದರ ವೈಷ್ಣವ ದೇವಾಲಯವೂ ಕಂಡುಬರುವುವು. ಅಚ್ಯುತರಾಯನ ಆನಂದನಿಧಿಯ ದಾನಪ್ರತಿ ಇಲ್ಲಿರುವುದರಿಂದ ೧೫೪೫ಕ್ಕೆ ಮೊದಲು ಈ ವಿಷ್ಣುಗುಡಿ ಇದ್ದಿತು. ಈಗ ಮೂರ್ತಿಯಿಲ್ಲವಾದ್ದರಿಂದ 'ಚಿನ್ನಹುಡಿಯಮ್ಮಗುಡಿ' ಎಂದು ಕರೆಯುತ್ತಿರುವರು. ಉತ್ತರಕ್ಕಿರುವ ಮುಖ್ಯದ್ವಾರದ ಗೋಪುರ ಸುಂದರವಾಗಿದೆ. ರಂಗಮಂಟಪದ ಉತ್ತರ, ದಕ್ಷಿಣ ಹಾಗೂ ಪೂರ್ವಕ್ಕೆ ಸೋಪಾನಗಳಿವೆ. ಒಳಗೆ ಚಚ್ಚೌಕಾರದ ಕಂಬಗಳಲ್ಲಿ ವೈಷ್ಣವ ದೃಶ್ಯಗಳನ್ನು ಬಿಡಿಸಲಾಗಿದೆ. ಇದರ ಪಕ್ಕದಲ್ಲಿರುವ ಅಮ್ಮನವರ ಗುಡಿ ಚಿಕ್ಕದಿದ್ದರೂ ಆಕಾರದಲ್ಲಿ ಮುಖ್ಯ ಗುಡಿಯಂತೆಯೇ ಇದೆ.

ಈ ಗುಡಿಯಿಂದ ದೊಡ್ಡಕಾಲುವೆಯತ್ತ ಮುಖವಾದಾಗ ಇರುವ ಟಿಸಿಲು ದಾರಿಯಲ್ಲಿ ಕ್ರಿ. ಶ. ೧೫೩೯ ರಲ್ಲಿ ಕಟ್ಟಿದ, ಅಚ್ಯುತರಾಯನಿಂದ ಮೂಡಲು ಪೆನುಗೊಂಡೆ ಬಾಗಿಲು ಬಳಿ ಸ್ಥಾಪಿತವಾದ ರಘುನಾಥಗುಡಿ ಇದೆ. ಶಾಸನಶಾಖೆಯವರು ಇದನ್ನು ಶಿವಾಲಯ ಎಂದೂ ಜನರು ಕಳ್ಳರಗುಡಿಯೆಂದೂ ಕರೆದಿದ್ದಾರೆ. ಗುಡಿ ಚಿಕ್ಕದಾಗಿಯೂ ಸುಂದರವಾಗಿಯೂ ಇದೆ. ಪೆನುಗೊಂಡೆ ಬಾಗಿಲಲ್ಲಿ ಗಣೇಶ ದೇವಾಲಯವಿದೆ. ಮೂರ್ತಿ

ಭಿನ್ನವಾಗಿದ್ದರೂ ಸುಂದರವಾಗಿದೆ. ಇದೇ ದಾರಿಯಲ್ಲಿ ಹಲವು ಶಿವಾಲಯ, ವೈಷ್ಣವಾಲಯಗಳು ಕಂಡುಬರುತ್ತವೆ.

ವರದಾಜಮ್ಮ ಪಾಂಡ್ಯರಾಜಕುಮಾರಿ, ಅಚ್ಯುತರಾಯನ ಪತ್ನಿ. ಇವಳ ನೆನಪಿಗಾಗಿ ವರದಾಜಮ್ಮ ಪಟ್ಟಣ ಕಟ್ಟಿಸಿರಬೇಕು. ಕ್ರಿ. ಶ. ೧೫೩೪ ರಲ್ಲಿಯೇ ಈ ಪಟ್ಟಣದ ಉಲ್ಲೇಖ ಶಾಸನಗಳಲ್ಲಿ ಆಗಿದೆ. ಈ ಕಾಲದಲ್ಲಿ ಅಚ್ಯುತರಾಯ ಲಕ್ಷಹೋಮ ಪೂರೈಸಿದ. ಅಳಿದು ಇನ್ನೂ ಉಳಿದಿರುವ ಮಂಟಪಗಳ ಅವಶೇಷಗಳಿಂದ ಮತ್ತೆ ಮೊದಲಿದ್ದ ಪೇಟೆ ಕಟ್ಟುವುದು ಸಾಧ್ಯವಿದೆ.

ರಘುನಾಥ ಅಥವಾ ಪಟ್ಟಾಭಿರಾಮಗುಡಿಯಿಂದ ಕಮಲಾಪುರದ ದಾರಿಯಲ್ಲಿರುವ ವಸ್ತುಸಂಗ್ರಹಾಲಯದ ಹತ್ತಿರ ಗುಡಿಯೊಂದಿದೆ. ಅದೀಗ ಶಿವಾಲಯವಾಗಿದ್ದರೂ ಹಿಂದೆ ವೈಷ್ಣವಾಲಯವಾಗಿತ್ತೆಂದು ತಿಳಿಯಲು ಸಾಧ್ಯವಿದೆ. ತಿರುಮಲಾದೇವಿಗೆ ತಿರುಮಲೆಯ ಜನನವಾದಾಗ ಇದೇ ಗುಡಿಗೆ ದಾನ ಕೊಟ್ಟಿರಬೇಕು. ಈ ಗುಡಿಯ ಕಂಬಗಳಲ್ಲಿ ಹಲವು ವೈಷ್ಣವ ಚಿತ್ರಗಳಿವೆ. ಗರ್ಭಗೃಹ ಹಾಗೂ ಶುಕನಾಸಿಕಗಳು ಇತ್ತೀಚಿನ ನಿರ್ಮಾಣಗಳು. ಪ್ರತಿಷ್ಠಾಪಿತಗೊಂಡಿದ್ದ ವೆಂಕಟೇಶ ಹಾಗೂ ಲಕ್ಷ್ಮೀ ವಿಗ್ರಹ ಹೋಳಾಗಿ ಹೊರಗೆ ಬಿದ್ದಿವೆ. ಅವನ್ನು ಸಂರಕ್ಷಿಸುವ ಕರ್ತವ್ಯ ನಮ್ಮದಾಗಿದೆ.

ಮುಂದೆ ದೊಡ್ಡ ಬಂಡೆಗಲ್ಲೊಂದರಲ್ಲಿ ಕೊಂಡಮರಸಯ್ಯನ ಪಾಳಯದಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯವನ್ನು ಕುರಿತ

ಶಾಸನವಿದೆ .ಕಾಮಲಾಪುರದಲ್ಲಿ ಈಗ ಪ್ರವಾಸಿ ಮಂದಿರವಾಗಿರುವುದೇ ಹಿಂದೆ ಲಕ್ಷ್ಮೀನರಸಿಂಹ ದೇವಾಲಯ ಆಗಿದ್ದಿರಬಹುದು.

ಕಾಮಲಾಪುರವನ್ನು ಕೃಷ್ಣದೇವರಾಯ ತನ್ನ ಪತ್ನಿ ಕಮಲಾದೇವಿ ಹೆಸರಿನಲ್ಲಿ ಕಟ್ಟಿಸಿದನೆಂದು ಹೇಳುವುದು ಸರಿಯಲ್ಲ. ವಿರೂಪಾಕ್ಷ ವಸಂತೋತ್ಸವ ಚಂಪುವಿನಲ್ಲಿ ವಿದ್ಯಾನಗರ, ಕಮಲಾಪುರಗಳ ಉಲ್ಲೇಖ ಏಕಕಾಲಕ್ಕೆ ಆಗಿದೆ. ಇದು ಎರಡನೆಯ ಹರಿಹರನ ಕಾಲವನ್ನು ನಿರ್ದೇಶಿಸುತ್ತದೆ ಅಲ್ಲದೆ ಕಮಲಾಪುರದ ಕೋಟೆ ಗೋಡೆಯಲ್ಲಿ ಹೊಯ್ಸಳ ಹಾಗೂ ಸಂಗಮರ ಲಾಂಛನವಾದ ಗಂಡಭೇರುಂಡವೂ ಇದೆ.

ಸಂಗಮರ ಕಾಲದ ಕಟ್ಟಡವಾದ ಮಲ್ಲೇಶ್ವರ ಗುಡಿಯ ಶಾಸನವೊಂದು ಹೊದಲ್ಲಿರುವ ಬಾವಿಯ ಬಗೆಗೆ ಹೇಳುತ್ತದೆ. ಬಡವಲಿ ಕಣಿವೆ ಮಾರ್ಗ ಹಾಗೂ ಬಿಸಿಲಹಳ್ಳಿ ಕಣಿವೆ ಮಾರ್ಗ ಕೂಡುವಲ್ಲಿ ಬುಳ್ಳಿನಾಯಕನ ಮಗ ಸೋವಣ್ಣನು ಕ್ರಿ. ಶ. ೧೪೧೨ ರಲ್ಲಿ ಪ್ರಯಾಣಿಕರಿಗೆ ಬಾವಿ ಕಟ್ಟಿಸಿ, ಅರವಟ್ಟಿಗೆ ಇಡಿಸಿದನು. ಈಗ ಇದಕ್ಕೆ 'ಸೂಳೆಬಾವಿ','ಸುಳಿಬಾವಿ' ಎಂದು ಕರೆಯುತ್ತಾರೆ.

ಕೃಷ್ಣದೇವರಾಯನು ತಿರುಮಲೆರಾಯನ ಜನ್ಮೋತ್ಸವದಲ್ಲಿ ಕ್ರಿ. ಶ. ೧೫೨೪ ರಲ್ಲಿ ಭವ್ಯವಾದ ಅನಂತಶಯನ ಗುಡಿ ಕಟ್ಟಿಸಿದನಲ್ಲದೆ, ಊರಿಗೆ ಶಾಲೆ ತಿರುಮಲೆರಾಯ ಪಟ್ಟಣ ಎಂದು ಹೆಸರಿಟ್ಟನು. ಈ ಗುಡಿಯ ಗರ್ಭಗೃಹ ದೊಡ್ಡದಾಗಿಯೂ ಮೋಹಕವಾಗಿಯೂ ಇದೆ. ಆದರೆ ಮೂರ್ತಿ ಇಲ್ಲವಾಗಿದೆ.

ಶುಕನಾಸಿಕ, ರಂಗಮಂಟಪ ಇದೆ; ಅಂತರಾಳಿಕ, ಪ್ರದಕ್ಷಿಣಾಪಥ ಇಲ್ಲ. ಗರ್ಭಗೃಹದ ಮೇಲ್ಛಾವಣಿ 'ಗೊಥಿಕ್' ಚರ್ಚಿನಂತೆ ಗುಮ್ಮಟ ಅಥವಾ ಕಮಾನು ಛಾವಣಿಯಂತಿದೆ. ಈ ರೀತಿಯ ಮೇಲ್ಛಾವಣಿ ಇರುವ ಮಂದಿರ ಇದು ಒಂದು ಮಾತ್ರ. ಪಾಯೆಸ್ ಈ ಮಂದಿರವನ್ನು ವರ್ಣಿಸಿದ್ದಾನೆ. ಕೃಷ್ಣದೇವರಾಯನ ಕಾಲದ ಸುದೀರ್ಘ ಶಾಸನವೊಂದು ಇದರ ವರ್ಣನೆ ಮಾಡುತ್ತದೆ. ಗುಡಿಯ ಮಹಾದ್ವಾರ ಉತ್ತರಕ್ಕಿದೆ. ಪೂರ್ವದ ಗೋಪುರ ಬಿದ್ದುಹೋಗಿದೆ. ಗರ್ಭಗೃಹದ ಶಿಖರವಿನ್ನೂ ಸುಭದ್ರಸ್ಥಿತಿಯಲ್ಲಿದೆ. ಗರ್ಭಗೃಹದ ಪಕ್ಕಕ್ಕೆ ಪದ್ಮಾಸನಾರೂಢ ದೇವಿಯ ಸುಂದರ ವಿಗ್ರಹವುಳ್ಳ ಗೃಹವಿದೆ. ದೇವಿಯ ಹಿಂದಿನ ಬಲ ಮತ್ತು ಎಡಗೈಗಳಲ್ಲಿ ಪದ್ಮವೂ ಮುಂದಿನ ಬಲಗೈ ಅಭಯವಾಗಿಯೂ ಎಡಮುಂಗೈ ವರದವಾಗಿಯೂ ಇದೆ. ಈ ಗುಡಿಯ ಒಂದು ಭಾಗಕ್ಕೆ ಮಂಟಪವೂ ಕೊಳವೂ ಇದೆ.

ಅನಂತಶಯನ ಗುಡಿಯ ಎದುರು ದಾರಿಯಲ್ಲಿ ಕ್ರಮಿಸಿದರೆ ಇರುವುದು ನಾಗಲಾಪುರ. ಇದನ್ನು ಕೃಷ್ಣದೇವರಾಯನ ಪುರೋಹಿತ ರಂಗನಾಥ ದೀಕ್ಷಿತ, ಅರಸನ ತಾಯಿ ನಾಗಲಾ ದೇವಿಯ ಹೆಸರಿನಲ್ಲಿ ೧೫೧೩ ರಲ್ಲಿ ಕಟ್ಟಿಸಿದನು. ಇಲ್ಲಿ ನಾಗಶಯನ ವಿಷ್ಣುವೂ ನಾಗೇಶ್ವರ ಗುಡಿಯೂ ಇದೆ.

ಇನ್ನು ಹರಿಹರ, ಚಿತ್ರದುರ್ಗ, ಹೊಸಪೇಟೆ ಮಾರ್ಗದಲ್ಲಿ ಕೆರೆಯೊಂದಿದೆ. ಇದನ್ನು ಕೃಷ್ಣದೇವರಾಯ ಕಟ್ಟಿಸಿದನೆಂದು ಪಾಯೆಸ್ ಮತ್ತು ನ್ಯೂನಿಜ್ ಹೇಳುತ್ತಾರೆ. ತಿರುಮಲಾ

ದೇವಿ ಪಟ್ಟಣವೂ ಇಲ್ಲಿ ಕಟ್ಟಲ್ಪಟ್ಟಿತು. ಅಂದರೆ ಈಗ ಹೊಸ ಅಣೆಕಟ್ಟು ಇರುವಲ್ಲಿಯೇ ಈ ಪಟ್ಟಣ ನಿರ್ಮಾಣವಾಗಿರಬಹುದು. ಆದರೆ ಈಗ ಯಾವುದೇ ಅವಶೇಷ ಇಲ್ಲಿ ಉಳಿದು ಬಂದಿಲ್ಲ. ಹೊಸಪೇಟೆ ಹಾಗೂ ಗದಗ ಮಾರ್ಗದಲ್ಲಿ ಒಂದು ದ್ವಾರ ಹಾಗೂ ಗಣೇಶಗುಡಿಯು ಹೊರತಾಗಿ ಬೇರೇನೂ ಉಳಿದಿಲ್ಲ. ಆದರೆ ಪಾಯೆಸ್ ಹಾಗೂ ನ್ಯೂನಿಜ್‌ರಿಂದ ಗೋವೆಯ ಪ್ರಯಾಣಿಕರು ಈ ಮಾರ್ಗವಾಗಿ ಬರುತ್ತಿದ್ದರಲ್ಲದೆ, ಇಲ್ಲಿಂದ ವಿಜಯನಗರದ ವರೆಗೂ ಇದ್ದ ರಾಜಮಾರ್ಗದ ಇಕ್ಕೆಲಗಳೂ ಮಂಟಪ, ಸಾಲುಮರಗಳಿಂದ ಶೋಭಿಸುತ್ತಿದ್ದವೆಂದು ತಿಳಿದು ಬರುತ್ತದೆ.

ಅಳಿದು ಅನಾಥವಾಗಿ ಅಳುತ್ತ ಬಿದ್ದಿರುವ ಹಂಪೆಯ ಕಲ್ಲುಕಟ್ಟಡಗಳ ವೀಕ್ಷಣೆಯಿಂದ ತಿಳಿಯುವ ಅಂಶಗಳಿವು: ಸಂಗಮ ವಂಶದ ಮೊದಲ ಅರಸರ ಕಾಲಕ್ಕೆ ತಲವಿನ್ಯಾಸದಿಂದ ಗೋಪುರ ವಿನ್ಯಾಸದ ವರೆಗೂ ಕಲ್ಲಿನಿಂದಲೇ ಗುಡಿ ನಿರ್ಮಾಣವಾಗುತ್ತಿದ್ದವು. ಕಂಬಗಳು ಚಚ್ಚೌಕವಾಗಿಯೂ ಒರಟಾಗಿಯೂ ರೂಪು ಪಡೆಯುತ್ತಿದ್ದವು. ಉದಾಹರಣೆಗೆ ಗಾಣಗಿತ್ತಿ ಹಾಗೂ ನರಸಿಂಹ ಗುಡಿಗಳನ್ನು ಕೊಡಬಹುದು. ಅನಂತರ ಕಟ್ಟಲ್ಪಟ್ಟ ಮಂದಿರಗಳಲ್ಲಿ ಚಚ್ಚೌಕಾಕಾರದ ಕಂಬಗಳ ಮೇಲೆ ದೃಶ್ಯಗಳನ್ನು ಬಿಡಿಸಿ ತೋರಿಸುವ ಶಿಲ್ಪಿಗಳ ಕೈಚಳಕ ಕಂಡು ಬರುವುದು. ಯಾವಾಗಲೂ ಮುಖ್ಯ ಹಾಗೂ ದೊಡ್ಡ ಗುಡಿಗಳ ಗೋಪುರ ಮತ್ತು ವಿಮಾನಗಳು ಗಚ್ಚುಗಾರೆಯಿಂದಲೇ ಆಕಾರ ಪಡೆ

ದಿವೆ. ಕೃಷ್ಣದೇವರಾಯನ ಕಾಲಕ್ಕೆ ಹಲವು ಕಂಬಗಳುಳ್ಳ ಮಂಟಪ ರಚನಾಪದ್ಧತಿ ರೂಢವಾಯಿತೆನ್ನಬಹುದು. ಆ ಮಂಟಪದ ಕಂಬಗಳ ಮೇಲೆ ಹಲವು ದೃಶ್ಯಗಳನ್ನೂ ಕೊರೆದಿದ್ದಾರೆ. ಅಚ್ಯುತರಾಯನ ಕಾಲದ ಗುಡಿಗಳು ಆಕಾರದಲ್ಲಿ ದೊಡ್ಡವಾಗಿಯೂ ವಿಶಾಲವ್ಯಾಪ್ತಿಯುಳ್ಳವಾಗಿಯೂ ದೃಶ್ಯದಲ್ಲಿ ಭವ್ಯತೆಯನ್ನೂ ಮೈಗೂಡಿಸಿಕೊಂಡಿವೆ. ಸದಾಶಿವರಾಯನ ಕಾಲದ ಗುಡಿಗಳು ಚಿಕ್ಕವಾಗಿದ್ದರೂ ಕಲ್ಲಿನಲ್ಲಿ ನಡೆದ ಕೆಲಸ ತುಂಬಾ ನಾಜೂಕಿನದೆಂದೇ ಹೇಳಬೇಕು. ಉದಾಹರಣೆಗೆ ತಿರುಮಂಗೈ ಆಳ್ವಾರರ ಗುಡಿ, ವಿಠಲಗುಡಿಯ ಮಹಾಮಂಟಪ ಅಥವಾ ಡೋಲೋತ್ಸವ ಮಂಟಪವನ್ನು ತಿಳಿಸಬಹುದು. ಈ ಡೋಲೋತ್ಸವ ಮಂಟಪವಂತೂ ವಿಜಯನಗರದ ಶಿಲ್ಪಕಲೆಗೆ ಕಿರೀಟಪ್ರಾಯವಾಗಿದೆ. ಎಲ್ಲ ಗುಡಿಗಳಲ್ಲೂ ಮುಖ್ಯಮಂದಿರದ ಎಡಕ್ಕೆ ಇರುವ ಮಂದಿರಗಳಲ್ಲಿ ಜೋಡು ಗರ್ಭಗೃಹ ಇರುವುದು ಸಾಮಾನ್ಯ. ಹೀಗೆ ಇನ್ನೂ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಿದೆ.

ಈ ನನ್ನ ಪುಟ್ಟ ಪ್ರಯತ್ನದಲ್ಲಿ ಸಾಮಾನ್ಯ ಪ್ರವಾಸಿಗಳಿಂದ ಸಂಶೋಧಕರ ವರೆಗೂ ಉಪಯೋಗವಿದೆಯೆಂಬ ಭರವಸೆ ನನಗೆ ಇದೆ. ಆ ದೃಷ್ಟಿಯಿಟ್ಟುಕೊಂಡೇ ಹಂಪೆಯ ದರ್ಶನವನ್ನು ಪೂರೈಸಿದ್ದೇನೆ. ಇನ್ನಾದರೂ ಅಳಿದು ಹಾಳುಬಿದ್ದಿರುವ ಹಂಪೆಯ ಅವಶೇಷಗಳ ಕಡೆಗೆ ನಮ್ಮೆಲ್ಲರ ಲಕ್ಷ್ಯ ಇರುವುದು ಸಂಸ್ಕೃತಿಯ ದೃಷ್ಟಿಯಿಂದ ನಾಡಿಗೆ ಒಂದು ಶುಭಸೂಚನೆಯೇ ಸರಿ. ಇದರಿಂದ ನನ್ನ ಶ್ರಮ ಸಾರ್ಥಕವಾಗುತ್ತದೆ.

ಉಪನ್ಯಾಸ ಗ್ರಂಥಮಾಲೆಯ

ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

ಮಾನಸಿಕ ರೋಗಗಳು — ಎಂ. ಬಿ. ರೇಣುಕಾರ್ಯ

ಕನ್ನಡದಲ್ಲಿ ಕಾದಂಬರಿ ಸಾಹಿತ್ಯ — ದು. ನಿಂ. ಬೆಳಗಲಿ

ಗರತಿಯರ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ — ದೇವೇಂದ್ರಕುಮಾರ ಹಕಾರಿ

ಮಾನವ ಮತ್ತು ಶಾಕಾಹಾರ — ಎ. ಎಸ್. ಧರಣೇಂದ್ರಯ್ಯ

ಕರ್ನಾಟಕದಲ್ಲಿ ರಾಷ್ಟ್ರೀಯತೆಯ ಬೆಳವಣಿಗೆ — ಎನ್. ಎ. ಪಾಟೀಲ

ಜಾನಪದ ಸಾಹಿತ್ಯದಲ್ಲಿ ಮಾತೃವಾತ್ಸಲ್ಯ — ಲೀಲಾವತಿ ತೋರಣಗಟ್ಟಿ

ಜನಪದದಲ್ಲಿ ಮಕ್ಕಳ ಸಾಹಿತ್ಯ — ಸಂಗಮೇಶ ಎಂ. ಬಿರಾದಾರ

ಪ್ರೇಮಚಂದರ ಸಣ್ಣ ಕತೆಗಳು — ಬಿ. ಎಫ್. ಹಸರಾಣಿ

ಕಬ್ಬು — ಎಂ. ರಾಮದಾಸ ಕಾಮತ

ಭಾರತೀಯ ಸ್ತ್ರೀಯ ಬದಲಾಗುತ್ತಿರುವ ಸ್ಥಾನಮಾನಗಳು — ಆರ್. ಡಿ. ಮೊಖಾಸಿ

ವ್ಯಾಸಂಗವಿಸ್ತರಣ–ಪ್ರಕಟನ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ,

ಧಾರವಾಡ–೫೮೦೦೦೩